# ಯುಗಾಂತ್ಯ

ಲಕ್ಷ್ಮೀನಾರಾಯಣ ಗಣಪತಿ ಅವರ ನಾಟಕ



ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು

# ಯುಗಾಂತ್ಯ

ಲೇಖಕರು

**ಲಕ್ಷ್ಮೀನಾರಾಯಣ ಗಣಪತಿ**

ಕರ್ನಾಟಕ ನಾಟಕ ಅಕಾಡೆಮಿ
"ಚಾಲುಕ್ಯ" - ಕನ್ನಡ ಭವನ, ಜೇ. ಸಿ. ರಸ್ತೆ,
ಬೆಂಗಳೂರು-೫೬೦ ೦೦೨

**YUGANTHYA :** a Kannada Drama Published by the Registrar, Karnataka Nataka Academy, Bangaloe-560 002 and Written by Shri Laxminarayana Ganapathi, No. 125, Beasley Ct. Cary, NC 27513, U.S.A.

ಪ್ರಕಟಣಾ ವರ್ಷ : 2006

© ಹಕ್ಕುಗಳು : ಲೇಖಕರದು

ಪುಟಗಳು : xii + 34

ಬೆಲೆ : ರೂ. 30/-

ಮುಖ ಪುಟ ವಿನ್ಯಾಸ : ಶ್ರೀ ಕೃಷ್ಣ ರಾಯಚೂರು

ಹಿಂಬದಿಯ ಛಾಯಾಚಿತ್ರ : ಶ್ರೀ ಬದ್ರಿಪ್ರಸಾದ್ ಸುಬ್ರಹ್ಮಣ್ಯನ್

ಪ್ರಕಾಶಕರು : ರಿಜಿಸ್ಟ್ರಾರ್
ಕರ್ನಾಟಕ ನಾಟಕ ಅಕಾಡೆಮಿ

Printers :

**Sathyasri Printers Pvt. Ltd.,**
No. 164, 5th Main Road, Chamarajapet
Bangalore-560 018. Telepone: **26525736**

## ಅರ್ಪಣೆ

ಮಹಾಭಾರತ ನಡೆದು ಹೋಗಿದ್ದು ದ್ರೌಪದಿಯ ಸಿರಿಮುಡಿಗಾಗಿ ಯೇನೋ ಎಂಬ ಕಲ್ಪನೆಗೆ ಒಳಪಟ್ಟವರಲ್ಲಿ ನಾನು ಸಹಾ ಒಬ್ಬ. ಆ ಮಹಾಗಾಥೆಯಿಂದ ಸ್ಫೂರ್ತಿಗೊಂಡ ಈ ಕೃತಿಯನ್ನು ನನ್ನ ಬದುಕಿನಲ್ಲಿನ ಸ್ತ್ರೀಯರಿಗೆ ಅರ್ಪಿಸುವ ಬಯಕೆ. ಓದುವಾಗಿನ, ನನ್ನ ಮುಖದಲ್ಲಿನ ಉತ್ಸುಕತೆಯಿಂದಲೇ ನನ್ನ ಬರಹಗಳ ಆಳ, ಅರ್ಥ ಗ್ರಹಿಸಿ ಅವುಗಳ ಪ್ರಕಟಣೆಗೆ ಒತ್ತಾಯಿಸುವ ನನ್ನ ಪ್ರೀತಿಯ ಉಸಿರಾದ ನಂದಿನಿ, ನನಗೆ ಉಸಿರು ಕೊಟ್ಟ ಅಮ್ಮ, ನನ್ನೊಂದಿಗೆ ಕರುಳು ಹಂಚಿಕೊಂಡು ನನ್ನ ಏಳ್ಗೆಯಲ್ಲಿ ಸಂತಸ ಪಡುವ ಲಲಿತಕ್ಕ, ಇವರುಗಳಿಗೆ ಅರ್ಪಣೆ.

# ಮನದ ಮಾತು

'ಯುಗಾಂತ್ಯ' ಹುಟ್ಟಿದ್ದು ಸಂವೇದನಾಶೀಲ ಮನಸ್ಸೊಂದು ನಮ್ಮ ಪುರಾಣಗಳಲ್ಲೇ ಮಹತ್ತರವಾದ ಮಹಾಭಾರತದ ಧಾರ್ಮಿಕ ಸೂಕ್ಷ್ಮತೆಗಳನ್ನು, ಅದರ ಪಾತ್ರಗಳ ಧರ್ಮ ಸಂಕಟಗಳನ್ನು, ತೂಕ ಮಾಡಿ ಆಸ್ವಾದಿಸಿದಾಗ. ದುರ್ಯೋಧನನಂತಹ ಪಾತ್ರವೊಂದನ್ನು ಖಳ ನಾಯಕನಿಂದ, ದುರಂತ ನಾಯಕನನ್ನಾಗಿಸುವ ಪ್ರಯತ್ನಗಳು ನಮಗೆ ತಿಳಿದಿವೆ. ಆದರೆ 'ಯುಗಾಂತ್ಯದ' ಒಟ್ಟಾರೆ ಗುರಿ ಯಾವುದೇ ಒಂದು ಪಾತ್ರವಷ್ಟೇ ಆಗಿರದೆ, ಭರತ ವರ್ಷದ ಮಹಾ ಕಥನವೇ ಆಗಿದೆ. ಹಾಗೆಂದಾಕ್ಷಣಕ್ಕೆ, ಈ ಮಹಾಕಾವ್ಯವನ್ನು ಮತ್ತೆ ಬರೆಯುವಂತಹ ಪ್ರಯತ್ನವಿದಲ್ಲ. ಬದಲು, ಸರಿ ತಪ್ಪುಗಳೆಂಬ ಸರಳೀಕೃತ ಚೌಕಟ್ಟಿಗೆ ಬದುಕನ್ನು ಕಟ್ಟಿ ಹಾಕಿದಾಗ ನಮಗೆ ಕಾಣಿಸುವ ಬದುಕಿನ ಸಿಕ್ಕುಗಳ ವಿಶ್ಲೇಷಣೆಯೆನ್ನಬಹುದು. ಇಲ್ಲಾ ಮಾನವ, ಕಾಲ ದೇಶಗಳೆರಡರಲ್ಲೂ ಚಿಕ್ಕದಾದ ತನ್ನ ಬದುಕನ್ನು ಚೊಕ್ಕದಾಗಿ ಬದುಕಿ ಸಾಗುವ ಬದಲು, ಕಾಲ ದೇಶಗಳ ಸೀಮೆಯಿಲ್ಲದ ಅನಂತ ಪ್ರಕೃತಿಯನ್ನು ನುಂಗಿ ಸವಿಯುವ ವ್ಯರ್ಥ ಚಪಲ ಸಾಧನೆಗೆ ಪ್ರಯತ್ನಿಸುವುದರ ಒಂದು ವಿಮರ್ಶೆಯೆನ್ನಿ.

ಈ ಸಣ್ಣ ಪ್ರಯತ್ನಕ್ಕೆ ಆಯ್ದುಕೊಂಡಿರುವ ಮುಖ್ಯ ಪಾತ್ರಗಳು ಮಹಾಭಾರತದಲ್ಲಿ ದಾರ್ಶನಿಕವಾಗಿಯೂ ಪ್ರಮುಖವೆನ್ನಬಹುದಾದ ಕೃಷ್ಣ, ಶಕುನಿ ಮತ್ತು ದ್ರೌಪದಿಯರದು. ಮಹಾಭಾರತದ ಕೆಲ ಪ್ರಮುಖ ಸನ್ನಿವೇಶಗಳಿಂದ ಪೋಷಣೆ ಪಡೆದುಕೊಳ್ಳುತ್ತಾ ಸಾಗುವ ಇಲ್ಲಿನ ಸಂವಾದ ಮುಖ್ಯವಾಗಿ ಈ ಮೂರು ಪಾತ್ರಗಳ ಸ್ವಗತ ಸಂಭಾಷಣೆಯಿಂದರೂ ನಡೆಯುತ್ತದೆ. ಕೃಷ್ಣ ಶಕುನಿಯರಿಬ್ಬರೂ ಒಂದು ರೀತಿಯಲ್ಲಿ ಮಹಾಭಾರತದ ಸೂತ್ರಧಾರರೆ. ಕೃಷ್ಣ ದೊಡ್ಡ ಮಟ್ಟದಲ್ಲಿ ಯಶಸ್ವಿಯಾದರೆ, ಶಕುನಿ ತನ್ನದೇ ಆದ ರೀತಿಯಲ್ಲಿ ಸೂತ್ರಧಾರಿಯಾಗಿದ್ದಾನೆ. ಹಾಗೆ ನೋಡಿದರೆ ಅತಿರಥ ಮಹಾರಥಿಗಳ ಸೂತ್ರಧಾರಿಯಾದ ಕೃಷ್ಣನಿಗೆ ಸಾಟಿಯಾಗಿ ಸ್ವಲ್ಪವಾದರೂ ಸವಾಲೆಸೆಯುವ ಪಾತ್ರ ಶಕುನಿಯದ್ದು ಮಾತ್ರ ಎಂಬ ವೈಯಕ್ತಿಕ ಮೆಚ್ಚಿಗೆಯೂ ಈ ಪಾತ್ರದ ಆಯ್ಕೆಗೆ ಕಾರಣ. ಜೊತೆಗೆ, ಖಳನಾಯಕರ ಖಳನಾಯಕ ಎನ್ನುವಂತಹ ಹಿರಿಮೆಯೂ ಶಕುನಿಗೆ ಸೇರಿದೆ. ಈ ಎರಡು ಸೂತ್ರಧಾರಿಗಳ ಸಂವಾದ ರೂಪವೇ 'ಯುಗಾಂತ್ಯ'.

ಮಾನವ ಬದುಕಿನಲ್ಲಿ 'ಸ್ತ್ರೀ' ಯ ಮಹತ್ತನ್ನು ಸಾರುವುದಕ್ಕೆ ದ್ರೌಪದಿಗಿಂತಲೂ ಮಹತ್ತರವಾದ ಪಾತ್ರ ಸಿಗುವುದು ದುರ್ಲಭ. ಐದು ಜನ ಗಂಡಂದಿರ ಪತಿವ್ರತೆಯಾದ ದ್ರೌಪದಿ, ಮಹಾಭಾರತದ ಮೂಲಕ ಹೇಳುವ ವ್ಯಥೆಯ ಕಥೆಗೆ ನಮ್ಮ ಸದ್ಯದ ಸಮಾಜ ಕಣ್ಣು ಮುಚ್ಚಿದೆಯೆಂದರೂ ತಪ್ಪಿಲ್ಲ. ಕೃಷ್ಣ, ಕೃಷ್ಣೆಯರಾಗಿಯೂ ಮಹಾಭಾರತದಲ್ಲಿ ಮಿಂಚುವ ಈ ಸಂಬಂಧ ಮತ್ತು ಸಖ್ಯದ ಮೂಲಕ, ಆಗಿನ ಕಾಲದ ಅತ್ಯಾಚಾರಗಳನ್ನು ತೆರೆದಿಡುವ ಉದ್ದೇಶವೂ

ಈ ಕೃತಿಗಿದೆ. ಐದು ಜನ ರಾಜಾಧಿರಾಜ ಗಂಡಂದಿರಿದ್ದೂ ಒಬ್ಬ ರಾಣಿಗೇ ನಡೆಯಬಹುದಾದ ಅತ್ಯಾಚಾರದ ಸಂದರ್ಭ, ಸೂಚ್ಯವಾಗಿ ನಮಗೆ ಹೇಳುವ ಮಹಿಳೆಯರ ಶೋಷಣೆಯ ಕಥನವನ್ನು ಊಹಿಸಿಕೊಳ್ಳುವಂತೆ ಓದುಗನನ್ನು ಪ್ರೇರೇಪಿಸುವ ಉದ್ದೇಶವೂ ಇದೆ. ದ್ರೌಪದಿಗಾಗಿಯೇ ನಡೆದುಹೋಗಿರಬಹುದಾದ ಕುರುಕ್ಷೇತ್ರದ ಯುದ್ಧದಲ್ಲಿನ ಮನುಷ್ಯನ ನಡತೆಗಳ ಆಭಾಸ ಇಂದಿಗೂ ಅರ್ಥಪೂರ್ಣವಾಗಿರುವ ವಿಷಯ. ಶಾಂತಿಗಾಗಿ ಯುದ್ಧಮಾಡುವ, ಬರ್ಬರ ಹಿಂಸೆಯ ನಿರ್ಮೂಲನಕ್ಕೆ ಹಿಂಸಾತ್ಮಕವಾಗಿಯೇ ಪ್ರಯತ್ನಿಸಿರುವ ಮನುಷ್ಯ ಪ್ರಯತ್ನದ ವ್ಯಂಗ್ಯಗಳ ನಡುವೆಯೇ ನಮಗೆ ಮಹಾಭಾರತಕ್ಕೊಂದು ಹೊಸ ಅರ್ಥ ಸಿಗುತ್ತದೆ.

ಹಾಗೆಂದ ಮಾತ್ರಕ್ಕೆ, ಕಾಲ ಚಕ್ರ ಉರುಳುರುಳಿ ಮರುಕಳಿಸುವ ಚರ್ವಿತಚರ್ವಣವೆ ಬದುಕು ಎಂದು ಸರಳೀಕೃತಗೊಳಿಸಿ ಅದನ್ನು ನಿಕೃಷ್ಟವಾಗಿಸುವ ಉದ್ದೇಶವಂತೂ ಇಲ್ಲಿಲ್ಲ. ಬದಲು ನಮ್ಮ ಬದುಕು ಒಂದು ಸುರುಳಿ; ಎರಡು ಆಯಾಮಗಳಲ್ಲಿ ಮತ್ತೆ ಮತ್ತೆ ಮರುಕಳಿಸಿದಂತೆ ಕಾಣುವ ಬದುಕನ್ನು ಮೂರನೇ ಆಯಾಮದಿಂದ ನೋಡಿದಾಗಷ್ಟೇ ನಮಗೆ ಬದಲಾದ ಕಾಲಚಕ್ರದ ಗತಿ ಅರ್ಥವಾದೀತು. ಇನ್ನು ಬದುಕಿಗೆಷ್ಟು ಆಯಾಮವೆಂಬ ಪ್ರಶ್ನೆಗೆ ಉತ್ತರಿಸುವ ಧಾರ್ಷ್ಟ್ಯ ಇಲ್ಲಿಲ್ಲ. ಭಾಷೆಯ ಸೊಗಸಿನಲ್ಲಿ, ಕಾಲದ ಸಿರಿಯನ್ನು ಹಿಡಿದು ರಂಗದ ಭ್ರಮೆಯಲ್ಲಿ, ಪಾತ್ರಗಳ ಮರೆಯಲ್ಲಿ ಸವಿಯುವ ಚಪಲವಷ್ಟೆ ಇದು.

ಯುಗಾಂತ್ಯವನ್ನು ತಮ್ಮ ರಂಗಭೂಮಿಕೆಯ ಅನುಭವದ ಹಿನ್ನೆಲೆಯಲ್ಲಿ ಕಂಡು, ಮೆಚ್ಚಿ, ಸಲಹೆಗಳನ್ನು ಕೊಟ್ಟು ಪ್ರೋತ್ಸಾಹಿಸಿದ 'ಭೂಮಿಕಾ'ದ ವಿಜಯಾ ಮತ್ತು ಮನೋಹರ ದಂಪತಿಗಳಿಗೆ ವಿಶೇಷ ಕೃತಜ್ಞತೆಗಳು. ಅಮೇರಿಕೆಯ ಭರಾಟೆಯ ಜೀವನದ ನಡುವೆಯೂ ತಮ್ಮ ಸಾಹಿತ್ಯ ಮತ್ತು ರಂಗಭೂಮಿಯ ಪ್ರೀತಿಯನ್ನುಳಿಸಿ ಕೊಂಡು ಬಂದಿರುವ ಈ ದಂಪತಿಗಳು 'ಭೂಮಿಕಾ' ಎಂಬ ಸಂಸ್ಥೆಯ ಮೂಲಕ, ಕನ್ನಡ ಸಾಹಿತ್ಯ ಮತ್ತು ನಾಟಕದ ಬೆಳವಣಿಗೆಗೆ ಅಮೇರಿಕೆಯಲ್ಲೊಂದು ಪ್ರೋತ್ಸಾಹಕರ ವಾತಾವರಣ ಸೃಷ್ಟಿಸಿದ್ದಾರೆ. ಹತ್ತು ವರ್ಷಗಳ ತಮ್ಮ ಪ್ರಯತ್ನಕ್ಕೆ 'ಯುಗಾಂತ್ಯ' ದಂತಹ ಕೃತಿಯ ಹುಟ್ಟು ಸಾರ್ಥಕತೆ ಒದಗಿಸುತ್ತದೆ ಎಂದು ಅಭಿಮಾನ, ಆತ್ಮೀಯತೆಯಿಂದ ಹೇಳಿಕೊಂಡ ವಿಜಯ ಕುಲಕರ್ಣಿಯವರ ಪ್ರೋತ್ಸಾಹ ಮರೆಯಲಾಗದ್ದು. ಭೂಮಿಕಾದಲ್ಲಿ ನಡೆಯುವ ಎಲ್ಲ ಕನ್ನಡ ಕಾರ್ಯಕ್ರಮಗಳಿಗೆ ಬಂದು ಪ್ರೋತ್ಸಾಹಿಸುವ ವಾಷಿಂಗ್ಟನ್ ಡಿ. ಸಿ. ಯ ಅನೇಕ ಕನ್ನಡ ಬಂಧುಗಳ ಪ್ರೋತ್ಸಾಹವನ್ನು ಇಲ್ಲಿ ನೆನೆಸಿಕೊಳ್ಳುತ್ತೇನೆ. ನನ್ನ ಬರಹಗಳಲ್ಲಿನ ಹೊಸತನವನ್ನು ಮೊದಲಿನಿಂದಲೂ ಮೆಚ್ಚಿಕೊಂಡು ಪ್ರೋತ್ಸಾಹಿಸಿದ, ಹಿರಿಯ ಸ್ನೇಹಿತರುಗಳಲ್ಲಿ ಪ್ರಮುಖರು ರಿಚ್ಮಂಡ್ ವರ್ಜೀನಿಯಾದ ಈಶ್ವರ ರಾಜು ಹಾಗು ಕ್ಯಾಲಿಫೋರ್ನಿಯಾದ ನಾಗ ಐತಾಳ, ಕೆ. ಆರ್. ಎಸ್ ಮೂರ್ತಿ ಮತ್ತು ವಿ. ಎಂ. ಕುಮಾರಸ್ವಾಮಿ.

ನನ್ನ ಕನ್ನಡದ ಬರಹಗಳನ್ನು ಮೊದಲಿನಿಂದಲೂ ಓದಿ ಮೆಚ್ಚಿಕೊಂಡವರಲ್ಲಿ ನನ್ನ ಅತ್ತೆ ಲಲಿತ ರಾಮಚಂದ್ರ ಭಟ್ ಸಹ ಒಬ್ಬರು. ನಮ್ಮ ಮಕ್ಕಳಿಗೆ ಪ್ರೀತಿಯ ಅಜ್ಜಿಯಾಗಿ ನೋಡಿಕೊಂಡಿದ್ದಷ್ಟೇ ಅಲ್ಲದೆ ದೂರದ ಊರಿನಲ್ಲಿ ತಾಯ್ನಾಡಿನ ಕನಸಿನಲ್ಲಿ ಅಳಿಯ ಬರೆಯುತ್ತಿದ್ದ ಕನ್ನಡದ ಲೇಖನ, ಕವನ, ಕಥೆ, ನಾಟಕ ಏನೇ ಆದರೂ ಸರಿ, ಓದಿ ಸಂಕೋಚದಿಂದೆಂಬಂತೆ, ಚೆನ್ನಾಗಿದೆ ಎಂದು ಹೇಳುತ್ತಿದ್ದಾಗಿನ ಪ್ರೋತ್ಸಾಹಕ್ಕ ಬೆಲೆ ಕಟ್ಟಲಾರೆ. ಉತ್ತರ ಕೆರೊಲಿನಾದ ಕನ್ನಡ ಕೂಟ 'ಸಂಪಿಗೆ' ಯ ಸ್ನೇಹಿತರುಗಳ ಪ್ರೋತ್ಸಾಹ ಅನನ್ಯವಾದದ್ದು. ಕರ್ನಾಟಕದಿಂದ ಸಹಸ್ರಾರು ಮೈಲುಗಳಾಚೆ ಕುಳಿತು ಬರೆಯುವಾಗ, ಇಂತಹ ಸ್ನೇಹಿತರುಗಳ ಪ್ರೋತ್ಸಾಹವಷ್ಟೇ ತಕ್ಷಣಕ್ಕೆ ದಕ್ಕುವಂತಹದ್ದು. ಲೇಖಕನೊಬ್ಬನ ಕನಸಿನಲ್ಲಷ್ಟೇ ಅಸ್ತಿತ್ವವಿರುವ ಎಷ್ಟೋ ಚಿಗುರುಗಳು ಬೆಳೆಯಬೇಕೆಂದರೆ, ಇಂತಹ ಸ್ನೇಹಿತರುಗಳ ಬೆಂಬಲ ಬೇಕೇ ಬೇಕು. ಸ್ನೇಹಿತನೊಬ್ಬನ ಕೃತಿಗೆ ಸಿಕ್ಕ ಮಾನ್ಯತೆಯಲ್ಲಿ ಸಂತಸ ವ್ಯಕ್ತ ಪಡಿಸಿದವರು 'ಸಂಪಿಗೆ' ಬಳಗದ ಸ್ನೇಹಿತರು.

ಹೊರನಾಡಿನ ಕನ್ನಡಿಗರಿಗೊಂದು ಅಭಿವ್ಯಕ್ತಿಯ ಕಿಂಡಿ ಸೃಷ್ಟಿಸಿದ thatskannada.com ಮತ್ತು ಇತರ ಪೋರ್ಟಲ್ಗಳು ಹಾಗೂ ಶ್ಯಾಮಸುಂದರ್ ಅವರಂತಹ ಸಂಪಾದಕರುಗಳ ಪಾತ್ರ ಹೊರನಾಡಿನಲ್ಲಿ ಕನ್ನಡ ಬೆಳೆಯುವುದಕ್ಕೆ ಪ್ರೋತ್ಸಾಹಕರವಾದ ಅಂಶಗಳು. ನನ್ನ ಬರಹಗಳನ್ನು ಮೆಚ್ಚಿಕೊಂಡು ಪ್ರೋತ್ಸಾಹಿಸಿದ ಶ್ಯಾಮಸುಂದರ್ ಪರೋಕ್ಷವಾಗಿಯಾದರೂ ನನ್ನ ಕನ್ನಡ ಕೃಷಿಗೆ ಕಾರಣರಾಗಿದ್ದಾರೆ. ಪ್ರಸಿದ್ಧ ನಟ, ನೃತ್ಯ ಪಟು ಶ್ರೀಧರ್ ನನ್ನ ಬರಹಗಳನ್ನು ಮೆಚ್ಚಿಕೊಂಡಿದ್ದೇ ಅಲ್ಲದೆ, ತಮ್ಮ ನೃತ್ಯ ಕಾರ್ಯಕ್ರಮದ ಮುನ್ನಾ ರಾತ್ರಿ, ನನ್ನ ಧ್ವನಿಯಲ್ಲಿದ್ದ ಯುಗಾಂತ್ಯದ ಧ್ವನಿ ಸುರುಳಿಯನ್ನು ನಿಮಗ್ನರಾಗಿ ಕೇಳಿದ ರೀತಿ ಈಗ ನಿಮ್ಮೆದುರಿಗೆ ಈ ಕೃತಿಯನ್ನು ಪ್ರಸ್ತುತಿ ಪಡಿಸಲು ಪ್ರೋತ್ಸಾಹಿಸಿದ ಅಂಶಗಳಲ್ಲೊಂದು. ಯುಗಾಂತ್ಯವನ್ನು ಬಹಳವಾಗಿ ಮೆಚ್ಚಿಕೊಂಡವರಲ್ಲೊಬ್ಬರು 'ವಿಚಿತ್ರಾನ್ನ' ಖ್ಯಾತಿಯ ಶ್ರೀವತ್ಸ ಜೋಷಿ. ಸಾಹಿತ್ಯ ನನಗೆ ಗೊತ್ತಿಲ್ಲ ಎಂದು ವಿನಯ ತೋರಿಸುವ ಶ್ರೀವತ್ಸ ಜೋಷಿ 'ಭೂಮಿಕಾ' ಕಾರ್ಯಕ್ರಮದಲ್ಲಿ ಆತ್ಮೀಯತೆಯಿಂದ ಹೇಳಿದ ಮೆಚ್ಚುಗೆಯ ಮಾತುಗಳ ಸತ್ಯವನ್ನು ನಿಜದಲ್ಲಿ ತೋರಿಸಿದವರು ಕಪ್ಪಣ್ಣ. ಅವರಿಗೆ ಯುಗಾಂತ್ಯದ ಕರಡು ಪ್ರತಿಯೊಂದನ್ನಿತ್ತಾಗ, ಅದು ಕನ್ನಡದ ಅಭಿಮಾನಿಗಳ ಕಣ್ಣಿಗೆ, ಇಷ್ಟು ಶೀಘ್ರವಾಗಿ, ಕೃಷ್ಣಮೂರ್ತಿ ಕವತ್ತಾರ್ ಅವರ ದಕ್ಷ ನಿರ್ದೇಶನದಲ್ಲಿ ನಾಟಕ ಅಕಾಡೆಮಿಯ ಕೊಡುಗೆಯಾಗುತ್ತದೆಂಬ ಕಲ್ಪನೆಯೂ ನನಗಿರಲಿಲ್ಲ. ಹೊರನಾಡಿನ ಮೂಲೆಯೊಂದರಲ್ಲಿ ಸೃಷ್ಟಿಯಾದ ಕೃತಿಯಲ್ಲಿನ ಹೊಸ ಆಶಯಗಳನ್ನು, ರಂಗಭೂಮಿಗೆ ಅದು ತೆರೆದುಕೊಳ್ಳಬಹುದಾದ ಹೊಸ ಸಾಧ್ಯತೆಗಳ ಚಿತ್ರವನ್ನು ಮನಸ್ಸಿನಲ್ಲಿಟ್ಟುಕೊಂಡು ಮುಂದುವರಿದ ಶ್ರೀನಿವಾಸ ಕಪ್ಪಣ್ಣ ಮತ್ತು ನಾಟಕ ಅಕಾಡೆಮಿಯ ಪ್ರಯತ್ನ ಕನ್ನಡದ ಬೆಳವಣಿಗೆಗೆ ಪ್ರೋತ್ಸಾಹಕರವಾದ ಅಂಶ. ಹೀಗೆ ಈ ಎಲ್ಲರ ಸಹೃದಯತೆಗೆ ನನ್ನ ವಿನಯಪೂರ್ವಕ ಕೃತಜ್ಞತೆಗಳನ್ನರ್ಪಿಸುತ್ತೇನೆ.

ಹೊಸ ಲೇಖಕನೊಬ್ಬನಿಗೆ ಬೆನ್ನುಡಿ ಬರೆದವರು ಕನ್ನಡ ರಂಗಭೂಮಿಯ ಒಡನಾಡಿಯಾಗಿ ನಿರ್ದೇಶಕರಾಗಿ ಪರಿಚಿತರಾದ ಡಾ॥ ನಾ. ದಾಮೋದರ ಶೆಟ್ಟಿ ಅವರು. ಇವರಿಗೆ ನನ್ನ ಅನಂತ ಕೃತಜ್ಞತೆಗಳು. ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿದ ಶ್ರೀ ಸತ್ಯಶ್ರೀ ಪ್ರಿಂಟರ್ಸ್‌ನ ಮಾಲಿಕರಿಗೂ ಮತ್ತು ಎಲ್ಲ ಸಿಬ್ಬಂದಿ-ವರ್ಗಕ್ಕೂ, ಮುಖ ಪುಟ ವಿನ್ಯಾಸ ಮಾಡಿದ ಶ್ರೀ ಕೃಷ್ಣ ರಾಯಚೂರು ಅವರಿಗೂ ನನ್ನ ಕೃತಜ್ಞತೆಗಳು. ಕಡೆಯದಾಗಿ, ಕೇವಲ ಸ್ನೇಹದಿಂದ ಆರಂಭವಾದ ಸಂಬಂಧವನ್ನು, ಸಮಾನ ಅಭಿರುಚಿಯತ್ತ ಬೆಳೆಸಿ ನನ್ನ ಬರಹಗಳನ್ನು ನಿರಂತರವಾಗಿ ಪ್ರೋತ್ಸಾಹಿಸಿ ಯುಗಾಂತ್ಯದ ಪ್ರಕಟಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ ಸಾಹಿತಿ ಮಿತ್ರ ಮಹಾಬಲಮೂರ್ತಿ ಕೊಡ್ಲೆಕೆರೆಯಂತವರ ಸ್ನೇಹ ಎಲ್ಲರಿಗೂ ದಕ್ಕಲೆಂದು ಆಶಿಸುತ್ತ.

**ಲಕ್ಷ್ಮೀನಾರಾಯಣ ಗಣಪತಿ**
125, Beasley Ct.
Cary, North Carolina 27513
USA
lganapathi@gmail.com
Tel. 919-319-5462

# ಅಮೇರಿಕಾದಲ್ಲಿ ಸಿಕ್ಕ
# ರಂಗ ಗಣಪತಿ

ಗೆಳೆಯ ಟಿ.ಎನ್. ಸೀತಾರಾಮ್ ಅವರೊಂದಿಗೆ ಅಮೇರಿಕಾದಲ್ಲಿ ಪ್ರವಾಸ ಮಾಡುತ್ತಿದ್ದೆ. ಹಲವಾರು ರಾಜ್ಯ, ಹಲವಾರು ಸ್ನೇಹಿತರ ಭೇಟಿ. ಇವರಲ್ಲಿ ವಿಶಿಷ್ಟರಾದವರು ಡಾ॥ ಲಕ್ಷ್ಮೀನಾರಾಯಣ ಗಣಪತಿ. ನಾರ್ತ್‌ಕೆರೊಲಿನಾದ ಕ್ಯಾರಿಯಲ್ಲಿ ಇವರ ಮಿಲನ. ಇದೇ ಅವರ ಮೊದಲ ಭೇಟಿ. ಆದರೂ ಸದಾ ತುಂಬು ಉತ್ಸಾಹದ, ಸ್ನೇಹ ತುಂಬಿದ ಮಾತುಗಳ ಗಣಪತಿ ಬಹುಬೇಗ ಆತ್ಮೀಯರಾದವರು. ನೋಡಲು ಕರಾವಳಿಯ ಸೌಂದರ್ಯವನ್ನು ಜ್ಞಾಪಿಸುವ ಚೆಲುವು. ಮಾತು ಚುರುಕು, ಆಕರ್ಷಕ. ಇವರ ಊರು ನಮ್ಮ ಕರಾವಳಿಯನ್ನು ಜ್ಞಾಪಿಸುವ ಪುಟ್ಟ ಪಟ್ಟಣ. ಕರಾವಳಿಯ ಈ ಗಣಪತಿ ನಿಜವಾಗಲೂ ಅಮೇರಿಕಾದಲ್ಲಿ ನಾನು ಭೇಟಿಯಾದ ಸಾಹಿತ್ಯ ಮಿತ್ರರ ನಡುವೆ ಎದ್ದು ನಿಲ್ಲುವ ಗಣಪತಿ. ಇವರ ಪರಿಚಯದಿಂದಾಗಿ ನನಗೆ ದೊರೆತದ್ದು ಸ್ನೇಹದ ಆತ್ಮೀಯತೆ ಹಾಗೂ ಸಂವಾದದ ತೀವ್ರತೆ. ಭಾರತದ ಬಗೆಗಿನ ಇವರ ಪ್ರೀತಿ, ಕಳಕಳಿಯಲ್ಲಿ ಈ ಆತ್ಮೀಯತೆ ಮತ್ತು ತೀವ್ರತೆ ಬೆಸೆದು ಒಂದಾಗುವ ರೀತಿಗೆ ನಾನು ಬೆರಗಾಗಿದ್ದೇನೆ. ಕನ್ನಡದ ವಾತಾವರಣ ಇಲ್ಲದ ವಿದೇಶದಲ್ಲಿ ಗಣಪತಿ ಅವರೊಡನೆ ವರ್ತಮಾನ ತೆರೆದುಕೊಳ್ಳುವಾಗ ಮೂಡುವ ವಿವಿಧ ಬಗೆಯ ಚಿಂತನೆಗಳು ಅದ್ಭುತವಾದವು. ಕಾರಣ ಏನಿರಬಹುದು!! ಸಿಕ್ಕ ಉತ್ತರ, ಅವರು ಲೇಖಕರು ಎಂಬುದು.

ನಾಟಕ ಅಕಾಡೆಮಿಯ ಅಧ್ಯಕ್ಷನಾಗಿ ರಂಗಭೂಮಿಯಲ್ಲಿ ಹಳತನ್ನು ಹಾಗೂ ಹೊಸತನ್ನು ಬೆರೆಸಿ ದೇಸೀ ರಂಗಭೂಮಿಯನ್ನು ನಿರ್ಮಿಸುವ ಕನಸು ನನ್ನದಾಗಿತ್ತು. ಈ ದಿಸೆಯಲ್ಲಿ ನನ್ನ ಹುಡುಕಾಟ ಹತ್ತಾರು. ಇಂತಹ ಸಮಯದಲ್ಲಿ ಗಣಪತಿ ನಾಟಕದ ಹಸ್ತಪ್ರತಿಯೊಂದನ್ನು ಕೊಟ್ಟು "ದಯಮಾಡಿ ನಿಮ್ಮ ಬಿಡುವಿನಲ್ಲಿ ಓದಿ, ಅಭಿಪ್ರಾಯ ಕೊಡಿ" ಎಂದರು. ಹೀಗೆ ಆರಂಭವಾಯ್ತು "ಯುಗಾಂತ್ಯ"ದ ಭಾರತ ಪ್ರಯಾಣ.

ನನ್ನ "ಬಿಡುವಿನಲ್ಲಿ" ನಾಟಕ ಓದಿದೆ. "ಅಭಿಪ್ರಾಯ" ಗಣಪತಿಯವರಿಗೆ ತಿಳಿಸಲಿಲ್ಲ. ತಿಳಿಸಿದ್ದು ರಂಗನಿರ್ದೇಶಕ ಕೃಷ್ಣಮೂರ್ತಿ ಕವತ್ತಾರ್‌ಗೆ. ನಾಟಕ ಕವತ್ತಾರ್‌ಗೆ ಇಷ್ಟ ಮಾತ್ರವಲ್ಲ, ಕಾಡಲು ಪ್ರಾರಂಭಿಸಿತು. ಪರಿಣಾಮ ಖ್ಯಾತ ನಟ ದಿವಂಗತ ಲೋಕೇಶ್ ನೆನಪಿನ ನಾಟಕೋತ್ಸವದಲ್ಲಿ ಪ್ರದರ್ಶನ. ರಂಗ ಪ್ರಯೋಗ ವಿಮರ್ಶಕರ ಮೆಚ್ಚುಗೆ, ರಂಗಾಸಕ್ತರ ಒಪ್ಪಿಗೆ ಪಡೆಯಿತು. ಆಗಲೂ ಗಣಪತಿಯವರಿಗೆ ಈ ಪ್ರಯೋಗದ ಬಗೆಗೆ ತಿಳಿಸಲು ಮರೆತಿದ್ದೆ. ಸಾಹಿತಿ ಮಿತ್ರ ಮಹಾಬಲಮೂರ್ತಿ ಕೊಡ್ಲೆಕೆರೆ ಅವರ ಸಮಯೋಚಿತ ನೆನಪು ನನ್ನನ್ನು ಸಂಕೋಚದಿಂದ ಪಾರು ಮಾಡಿತು. ಕೊಡ್ಲೆಕೆರೆಯವರ e.mailನಿಂದ ಸಿಟ್ಟಾಗದೆ ಮತ್ತೆ e.mailನಲ್ಲೇ ಮುಗುಳ್ನಕ್ಕರು ಗಣಪತಿ ಸದ್ಯ. ಈ ನಾಟಕದ ಮತ್ತೊಂದು ಪ್ರಯೋಗ ಕುಂದಾಪುರದಲ್ಲಿ ಆದಾಗಲೂ ಎಲ್ಲರಿಂದ ಸೈ ಎನಿಸಿಕೊಂಡಿತು. ಆಧುನಿಕರು ಮೆಚ್ಚಿದರು. ಕೆಲವು ಸಾಂಪ್ರದಾಯಿಕ ಯಕ್ಷಗಾನ

ಕಲಾವಿದರು ಬೆಚ್ಚಿದರು. ಹೀಗೆ ಕನ್ನಡ ರಂಗಭೂಮಿಯಲ್ಲಿ "ಯುಗಾಂತ್ಯ"ದ ಆದಿ ಆರಂಭವಾಗಿದೆ.

ರಂಗಭೂಮಿಯ ಇತಿಹಾಸವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಪುರಾಣ ಕಥೆಗಳಿಂದ ರಂಗಭೂಮಿಯ ಆರಂಭ. ಇದೇ ಕಥೆಗಳು ಜಾನಪದ ರಂಗಭೂಮಿಯಲ್ಲಿ ಮರುಪ್ರವೇಶ. ವೃತ್ತಿ ರಂಗಭೂಮಿಯಲ್ಲಿ ನಿರ್ದಿಷ್ಟ ಸ್ವರೂಪ, ಈಗ ಮತ್ತೆ ಆಧುನಿಕತೆಯ ವೇಷದಲ್ಲಿ ಇಂದಿನ ರಂಗಭೂಮಿಯಲ್ಲಿ ಪರಕಾಯ ಪ್ರವೇಶ ಪಡೆದಿದೆ. ಕಥೆಗಳು ಪುರಾಣ ಪ್ರಸಂಗದ ಒಂದು ಸಣ್ಣ ಎಳೆ. ಆದರೆ ಅದನ್ನು ಅರ್ಥೈಸುವ ವ್ಯಾಪ್ತಿ ವಿಶಾಲ. ನಾನು ಗುರುತಿಸುವ ಇಂದಿನ ರಂಗಶೈಲಿ ಇದು. ಟಿ.ಪಿ. ಕೈಲಾಸಂ, ಶ್ರೀರಂಗರಿಂದ ಆರಂಭವಾಗಿ ಇತ್ತೀಚೆಗೆ ಗಿರೀಶ್ ಕಾರ್ನಾಡ್‌ರಿಂದ ಗಟ್ಟಿಯಾದ ಈ ಶೈಲಿಯನ್ನು ಗಣಪತಿಯವರ "ಯುಗಾಂತ್ಯ"ದಲ್ಲಿ ನಾನು ಗುರುತಿಸುತ್ತೇನೆ.

ಈ ನಾಟಕದಲ್ಲಿನ ಪಾತ್ರಗಳು ಒಂದು ಇನ್ನೊಂದನ್ನು ಪ್ರಶ್ನಿಸುತ್ತ ಎಬ್ಬಿಸುವ ಸಂವಾದ ಇಡೀ ಮಹಾಭಾರತದ ಸಂವಿಧಾನಕ್ಕೆ ಒಂದು ಹೊಸ ಸ್ವರೂಪವನ್ನು ಕೊಡುತ್ತದೆ. ಕುಂಟುತ್ತಲೇ ನಡೆದ ಶಕುನಿಯಂತಹ ದುಷ್ಟನ ಬಗೆಗೂ 'ಅರೇ ಇವನ ಅಂತರಂಗದೊಳಗಿನ ನಿಶ್ಕಲ್ಮಷ ಭಾವದುಮ್ಮಳ ಎಂತಹ ನೋವಿನ ಪರಿಯದು' ಎಂಬ ವಿಷಾದ ಓದುಗನೊಳಗೆ ಆವರಿಸದೇ ಉಳಿಯದು. ಮುಂದೆ ಇನ್ನೂ ಮುಂದೆ ನಾಟಕದ ಒಡಲಾಳ ದ್ರೌಪದಿ ಹಾಗೂ ಕೃಷ್ಣರ ಪ್ರಶ್ನೆ, ಮರುಪ್ರಶ್ನೆ, ಉತ್ತರಗಳ ನಡುವೆ ಬೆಳೆಯುತ್ತಲೇ ಹೋಗುತ್ತದೆ.

ಅಭಿಮನ್ಯು, ಉಪಪಾಂಡವರ ಸಾವುಗಳು ಹೊಸ ವಿಚಾರಗಳನ್ನು ಯೋಚನೆಗೆ ಕಟ್ಟಿ ಕೊಡುತ್ತವೆ. ದುರ್ಯೋಧನ, ಧರ್ಮರಾಜ, ಭೀಮಾದಿ ಪಾಂಡವ, ಕೌರವರು, ದ್ರೋಣ, ಅಶ್ವತ್ಥಾಮ, ಭೀಷ್ಮ, ಕರ್ಣ, ಶಕುನಿಗಳಿತ್ಯಾದಿ ಭಟರ ಒಳಮನಸ್ಸಿನ ತಾಕಲಾಟ, ದುರ್ಬುದ್ಧಿ, ಅಸಹಾಯಕ ಗೋಳಾಟಗಳ ಹೊಸದೊಂದು ಅನಾವರಣ ದಾಖಲಾಗುತ್ತದೆ.

ಈ ಕೃತಿಗೆ ಹೊಸ ಆಶಯವಿದೆ. ಭಾರತದ ಪುರಾಣಗಳ ಕುರಿತಾಗಿ, ತಾಯ್ನಾಡಿನಿಂದ ಹೊರಹೋಗಿ, ಭೋಗ ಭೂಮಿ ಎಂದಾದ ಅಮೇರಿಕಾದಲ್ಲೂ, ಭೂತಕಾಲದ ಮೂಲಕ, ಭಾರತದ ವರ್ತಮಾನದ ಸೌಖ್ಯವನ್ನು ಹೊಸದೇ ರೀತಿಯಲ್ಲಿ ಕನಸುತ್ತ ವೈಚಾರಿಕ ನೆಲೆಯಲಿ ಅಭಿವ್ಯಕ್ತಿಗೊಳಿಸುವುದಿದೆಯಲ್ಲ.. ಈ ಕ್ರಮ ನನಗೆ ಸೇರಿತು. ನನಗೆ ಸೇರಿದ ಈ ಕ್ರಮ ನಿಮಗೂ ಹಿಡಿಸುತ್ತದೆ ಎಂಬುದು ನನ್ನ ನಂಬಿಕೆ. ಈ ನಂಬಿಕೆಯನ್ನು ನನಗೊದಗುವಂತೆ ಮಾಡಿದ ಗಣಪತಿಯವರಿಗೆ ಅಕಾಡೆಮಿ ವತಿಯಿಂದ ಹಾಗೂ ವೈಯಕ್ತಿಕವಾಗಿ ಕೃತಜ್ಞತೆಗಳು.

ಶ್ರೀನಿವಾಸ ಜಿ. ಕಪ್ಪಣ್ಣ
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು-೧

## ಲೇಖಕರ ಕುರಿತು

ಶ್ರೀ ಲಕ್ಷ್ಮೀನಾರಾಯಣ ಗಣಪತಿಯವರ ಬಾಲ್ಯ ಮಂಗಳೂರು ಜಿಲ್ಲೆಯಲ್ಲಿ ಕಳೆದರೆ, ಹೈಸ್ಕೂಲು, ಕಾಲೇಜು ಮತ್ತು ಸ್ನಾತಕೋತ್ತರ ವಿದ್ಯಾಭ್ಯಾಸಗಳು ಮೈಸೂರಿನಲ್ಲಿ. ನಂತರ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಖ್ಯಾತ ವಿಜ್ಞಾನಿ ಪ್ರೊ. ಸಿ. ಎನ್. ಆರ್. ರಾವ್ ಅವರ ನಿರ್ದೇಶನದಲ್ಲಿ ಸಂಶೋಧನೆ ನಡೆಸಿ ಪಿ. ಎಚ್. ಡಿ. ಪದವಿ ಗಳಿಸಿದರು. ೭೪ ರಿಂದ ೮೨ ರ ವರೆಗೆ ಮೈಸೂರಿನಲ್ಲಿ ಕಳೆದ ದಿನಗಳಲ್ಲಿ, ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಅಭಿರುಚಿಗಳನ್ನು ಬೆಳೆಸಿಕೊಳ್ಳಲು ತಕ್ಕುದಾದ ವಾತಾವರಣ ಅಲ್ಲಿತ್ತು ಎಂದು ನೆನೆಸಿಕೊಳ್ಳುತ್ತಾರೆ.

ಹಳೆಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಾಲ್ಯವನ್ನು ಕಳೆದ ನಂತರ ಮೈಸೂರಿಗೆ ವಲಸೆ ಬಂದ ಗಣಪತಿ ನಂತರ ಬೆಂಗಳೂರಿಗೆ ಸಾಗಿ ಮುಂದೆ ಅಮೇರಿಕಾ ಸಂಯುಕ್ತ ಸಂಸ್ಥಾನಕ್ಕೆ ಸಾಗಿದ್ದು ಒಂದರ್ಥದಲ್ಲಿ ನಮ್ಮಲ್ಲನೇಕರು ಬದುಕಿನಲ್ಲಿ ನಡೆಸಲೇ ಬೇಕಾದ ಹೋರಾಟದ ಮಾದರಿಯಂತಿದೆ. ಆರು ವರ್ಷ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಸಂಶೋಧನೆ ಮಾಡಿದ ನಂತರ ಎಲ್ಲರಂತೆ ಹೆಚ್ಚಿನ ಅನುಭವಕ್ಕಾಗಿ ಅಮೇರಿಕಾಗೆ ತೆರಳಿದ ಗಣಪತಿ, ತಾನು ಕಂಡ ಪಾಶ್ಚಿಮಾತ್ಯ ಜಗತ್ತು ಆಗ ತಮ್ಮ ಎಣಿಕೆಗೆ ಸಿಕ್ಕದ ಆಯಾಮಗಳನ್ನು ಹೊಂದಿತ್ತು ಎನ್ನುತ್ತಾರೆ. ಸಮಾಜವಾದಿ ಮತ್ತು ಲೋಹಿಯಾವಾದಿ ಕನ್ನಡ ಸಾಹಿತಿಗಳಿಂದ ಪ್ರಭಾವಿತರಾದವರಿಗೆ, ಮೊದಲ ಬಾರಿಗೆ ವಿಶ್ವ ರಾಜಕೀಯದ ಬಗ್ಗೆ ಬೇರೆಯೇ ಒಂದು ಚಿತ್ರಣ ದಕ್ಕಿತು.

ಹದಿನೈದು ವರ್ಷಗಳಿಗೂ ಮಿಕ್ಕ ಅಮೇರಿಕಾ ವಾಸದಲ್ಲಿ ಹೆಂಡತಿ ಮತ್ತು ಎರಡು ಮಕ್ಕಳ ಸಂಸಾರದ ಬಗ್ಗೆ ತಮಗಿರುವ ಪ್ರೀತಿಯ ಸ್ವರೂಪಕ್ಕೆ ಅಮೇರಿಕನ್ನರಿಂದ ಕಲಿತಿದ್ದೂ ಸೇರಿಕೊಂಡಿದೆಯೊಂದು ನಿಸ್ಸಂಕೋಚವಾಗಿ ಒಪ್ಪಿಕೊಳ್ಳುವ ಬಗೆ, ಅವರ ಬಗ್ಗೆ ಮತ್ತಷ್ಟು ಕುತೂಹಲ ಹುಟ್ಟಿಸುತ್ತದೆ. ನಮ್ಮ ಹಳೆಯ ಸಂಪ್ರದಾಯವೆಲ್ಲವೂ ಚೆನ್ನು ಹೊರನಾಡಿನಲ್ಲಿರುವುದು ಬರೆ ಹೊನ್ನು ಎಂಬ ಅಭಿಪ್ರಾಯ ಹೆಚ್ಚಿನವರಿಂದ ಕೇಳಿದ್ದವರಿಗೆ, 'ಭಾರತ ಅಮೇರಿಕಾದ ಹುಚ್ಚಿನಲ್ಲಿರುವಂತೆ ಕಂಡರೂ,' ಒಂದು ರೀತಿಯಲ್ಲಿ ಅಮೇರಿಕಾ ಸಹಾ ಭಾರತವಾಗುತ್ತಿದೆ ಎನ್ನುವ ಲೇಖಕರೊಡನೆ ಮಾತು ಬೆಳೆಸಿದಾಗ ತಿಳಿಯುವ ಅಭಿಪ್ರಾಯದ ಒಟ್ಟರ್ಥವೆಂದರೆ, ಸಾವಿರಾರು ವರ್ಷಗಳಿಂದ ಭಾರತದಲ್ಲಿ ವಲಸೆ, ವರ್ಣ ಸಂಕರಗಳು ಸಾಗಿದ್ದರೆ, ಅಮೇರಿಕಾದಲ್ಲಿ ಅದು ತೀರಾ ಇತ್ತೀಚಿನ ವಿಷಯ ಎಂಬುದು. ಭಾರತದಲ್ಲಿನ ಸುವರ್ಣಯುಗದಂತೆಯೇ ಈಗ ಅಮೇರಿಕಾ ಹಾಲು ಜೇನುಗಳ ನಾಡಾಗಿದೆ. ವಲಸೆಕಾರರ ದೆಸೆಯಿಂದಾಗಿ, ಭವಿಷ್ಯದಲ್ಲಿ ಅಮೇರಿಕಾ ಸಹ ತನ್ನ ಸಂಸ್ಕೃತಿಯನ್ನು ಮಾರ್ಪಡಿಸಿಕೊಳ್ಳುತ್ತ ಸಾಗಲಿಕ್ಕುಂಟು

ಎಂಬುದು ಅವರ ನಂಬುಗೆ. ಭಾರತೀಯನಾಗಿ ಅತ್ಯಂತ ಹೆಮ್ಮೆ ಪಡುವ ಮರುಕ್ಷಣದಲ್ಲೇ, ಸದ್ಯಕ್ಕೆ ವಿಜ್ಞಾನ, ತಂತ್ರಜ್ಞಾನದ ಮುಂಚೂಣಿಯಲ್ಲಿದ್ದು, ಸಾಂಸ್ಕೃತಿಕ ಮತ್ತು ಸಾಮಾಜಿಕ ವಿಕಾಸ ಹೊಂದುತ್ತಾ ಸಾಗಿರುವ ಒಂದು ದೇಶಕ್ಕೆ ಭಾರತೀಯರು ವಲಸೆ ಹೋಗುವುದು ಒಂದು ಕರ್ತವ್ಯವೆಂಬಂತೆಯೂ ವಾದಿಸುವ ಗಣಪತಿಯವರ ಜಿಜ್ಞಾಸೆಗಳು ಅರ್ಥಪೂರ್ಣವಾಗಿರುತ್ತವೆ.

ಭವಿಷ್ಯದಲ್ಲೇನೇ ಇದ್ದರೂ, ಗಣಪತಿ ಯೋಚಿಸುವ ಹೊಸ ಧಾಟಿ ಉತ್ಸಾಹಭರಿತ ವಾದುದು. 'ಗ್ಲೋಬಲೈಝೇಶನ್', 'ಕಾಲ್ ಸೆಂಟರ್' ಅಂತಹ ಇತ್ತೀಚಿನ ಬೆಳವಣಿಗೆಗಳು, ಅಹಿಂಸಾತ್ಮಕವಾಗಿ ಜಗತ್ತಿನ ಸಂಪತ್ತು ಹಂಚಿಕೊಳ್ಳುವ ರೀತಿಯೆನ್ನುವ ಗಣಪತಿಗೆ ಶಿವರಾಮ ಕಾರಂತರಂತಹ ಔದ್ಯಮಿಕ ಮನೋಭಾವವುಳ್ಳ ಹಿರಿಯರು 'ಗ್ಲೋಬಲೈಝೇಶನ್' ಬಗ್ಗೆ ಏನು ಹೇಳಿಯಾರೆಂಬ ಕುತೂಹಲ. 'ರೊನಾಲ್ಡ್ ರೇಗನ್' ರ trickle down economics ತಪ್ಪು ಎಂದು ಸಾಬೀತು ಪಡಿಸಲು ಒಂದು ಕಾರಣ ಕೊಡಿ ಎಂದು ನಮ್ಮನ್ನೇ ಪ್ರಶ್ನಿಸುವ ಗಣಪತಿಯವರದು ಪ್ರಾಮಾಣಿಕವಾಗಿ ತೆರೆದುಕೊಂಡ ಮನಸ್ಸು. ನಾನೇನು ಅರ್ಥ ಶಾಸ್ತ್ರಜ್ಞನಲ್ಲ; ಆದರೆ, ಇನ್ನೊಬ್ಬರು ಶ್ರೀಮಂತರಾಗುವುದನ್ನು ತಪ್ಪಿಸಿದರೆ ನಮಗೇನು ಪ್ರಯೋಜನ ಹೇಳಿ? ಎಂಬ ಪ್ರಶ್ನೆಗೆ ಉತ್ತರ ಕಷ್ಟವೇ ಬಿಡಿ. ಇನ್ನು ಅವರ ಮಾತು ಕೇಳಿದರೆ ಈ 'ರೇಗನಾಮಿಕ್ಸ್' ನಮ್ಮಲ್ಲಿಯೂ ನಡೆದೀತೇನೋ ಎಂದು ಒಂದು ಘಳಿಗೆ ಗಾದರೂ ನಿಮಗೆ ಅನಿಸಬಹುದು. 'ಶೋಷಣೆ' ಶ್ರೀಮಂತಿಕೆಯ ಮುಖವಾಡದಲ್ಲಿ ಯಷ್ಟೇ ಬರಬೇಕಾಗಿಲ್ಲ ಎನ್ನುತ್ತಾ ಸದ್ಯದಲ್ಲಿಯೇ ಜಾತಿಯಂತಹ 'ರಾಜಕೀಯ' ದಾಳಗಳನ್ನು ನಮ್ಮ ಮುಂದಿನ ಜನಾಂಗ ನಿರುಪಯುಕ್ತ ಗೊಳಿಸಿಬಿಡುತ್ತದೆನ್ನುವ ಅವರ 'ಆಶಾಭಾವನೆ' ಜೀವನದಲ್ಲಿ ಅಗತ್ಯ.

ಅವರ ಪ್ರಗತಿಗಾಮಿ ಧೋರಣೆಗಳಲ್ಲಿ, ಅನಂತಮೂರ್ತಿ, ಕಾರಂತ, ಕಂಬಾರ, ಕುವೆಂಪು, ಕಾರ್ನಾಡ್, ಲಂಕೇಶ್, ದ್ಯಾವನೂರು, ತೇಜಸ್ವಿ ಹೀಗೆ ೭೦–೮೦ ರ ದಶಕಗಳ ಸಾಹಿತ್ಯದ ದಿಗ್ಗಜಗಳ ಪ್ರಭಾವ ಕಾಣಬರು ದು. ತಮ್ಮ ಬದುಕು ರೂಪಿಸಿಕೊಳ್ಳುವಲ್ಲಿ ಕನ್ನಡದ ಎಲ್ಲ ಸಾಹಿತಿಗಳ ಪಾತ್ರವಿದೆ. ನವೋದಯ, ನವ್ಯ, ಬಂಡಾಯ ಇತ್ಯಾದಿ ಎಲ್ಲ ಸಂಪ್ರದಾಯದಿಂದಲೂ ತಾನು ಪ್ರಭಾವಿತನಾಗಿದ್ದೇನೆನ್ನುವ ಗಣಪತಿ ಒಂದೈವತ್ತು ಕವನಗಳನ್ನು ಬರೆದು ಪ್ರಕಟಣೆಗೆ ಕಾಯುತ್ತಿದ್ದಾರೆ. 'ಹಾಲಿಂದ ಮಿಂದು ಜೇನಿಂದ ನೊಂದವರು' ಎಂಬ ಕಾದಂಬರಿಯೂ ಮುಕ್ತಾಯ ಹಂತದಲ್ಲಿದೆ. ಈ ನಡುವೆ ಇವರನ್ನು ಕಲಕಿದ ಮಹಾಭಾರತದ ಕೆಲ ಸಂಕೀರ್ಣ ಸಂದರ್ಭಗಳ ಜಿಜ್ಞಾಸೆಯನ್ನು ಹಲವು ಪ್ರಮುಖ ಪಾತ್ರಗಳ ಸಂವಾದವಾಗಿ 'ಯುಗಾಂತ್ಯ' ನಾಟಕದಲ್ಲಿ ನಮ್ಮ ಮುಂದಿಟ್ಟಿದ್ದಾರೆ

# ಯುಗಾಂತ್ಯ

ಯುಗಾಂತ್ಯ ಎರಡು ಸ್ತರದಲ್ಲಿ ಸಂವಾದಿಸುವ ನಾಟಕ. ಹಿನ್ನೆಲೆಯಲ್ಲಿ ಫ್ಲಾಷ್‌ಬ್ಯಾಕ್ ತರಹ ನಡೆಯುವ ಮಹಾಭಾರತದ ಅಂಕಗಳೊಂದಾದರೆ, ಶಕುನಿ, ಕೃಷ್ಣ ಮತ್ತು ದ್ರೌಪದಿಯ ಪಾತ್ರಗಳು ವರ್ತಮಾನದಲ್ಲಿಯೂ ಮಾತನಾಡುತ್ತವೆ. ಅದರಲ್ಲೂ ಶಕುನಿ ಮತ್ತು ಕೃಷ್ಣ ವರ್ತಮಾನದಲ್ಲಷ್ಟೆ ಮಾತನಾಡಿದರೆ, ದ್ರೌಪದಿಯ ಮಾತುಗಳು ಎರಡೂ ಕಡೆ ಇರುತ್ತವೆ. ಪ್ರೇಕ್ಷಕನಿಗೆ ಗಲಿಬಿಲಿಯಾಗದಿರುವಂತೆ, ಇಬ್ಬರು ದ್ರೌಪದಿಯ ಪಾತ್ರವಹಿಸಿದರೂ ಸರಿಯೆ. ಇಲ್ಲದಿದ್ದರೆ, ರಂಗ ಸಜ್ಜಿಕೆಯ ಸಹಾಯದಿಂದ, ಬದಲಾದ ಕಾಲ ಮತ್ತು ಸನ್ನಿವೇಶಗಳನ್ನು ತಿಳಿಸಬೇಕು.

ನಾಟಕ ಶಕುನಿಯ ಪ್ರಲಾಪದಿಂದ ಶುರುವಾಗುತ್ತದೆ. ನಾಟಕದ ಮೂಲ ಉದ್ದೇಶ, ಮಹಾಭಾರತದ ಸಂದರ್ಭದಲ್ಲಿ ಕೃಷ್ಣನ ಕೈವಾಡವನ್ನು ಟೀಕಿಸಿ ವಿಮರ್ಶಿಸುವುದು. ಈ ವಿಮರ್ಶೆ ವರ್ತಮಾನದಲ್ಲಿ ನಡೆಯಬೇಕಾಗಿರುವುದರಿಂದ, ಈ ಸಂದರ್ಭದಲ್ಲಿ ಕಾಣಿಸಿಕೊಳ್ಳುವ ಶಕುನಿ ಮತ್ತು ದ್ರೌಪದಿಯರದು ಒಂದು ಕಾಲ್ಪನಿಕ ಅಸ್ತಿತ್ವ. ಆತ್ಮದಲ್ಲಿ ನಂಬಿಕೆಯುಳ್ಳವರಿಗೆ ಅವರ ಆತ್ಮವೆಂದು ಕೊಂಡರೂ ನಡೆಯುತ್ತದೆ. ಕೃಷ್ಣನ ಅಸ್ತಿತ್ವ ಯಾವ ಕಾಲದಲ್ಲೂ ಸಮಸ್ಯೆ ತರಲಾರದು; ಭಗವಂತನಲ್ಲವೆ! ಹಾಗಿದ್ದರೂ, ಕೊನೆಯಲ್ಲಿ, ದ್ರೌಪದಿಯನ್ನು ತನ್ನೊಡನೆ ಕರೆದೊಯ್ಯುವಲ್ಲಿ, ಅವನಿರುವ ಜಗತ್ತು ನಮ್ಮದಲ್ಲವೆಂಬುದರ ಅರಿವು ಮೂಡುತ್ತದೆ. ಒಟ್ಟಿನಲ್ಲಿ ಕೃಷ್ಣನ ವಿಮರ್ಶೆ ನಡೆಯುವ ಸನ್ನಿವೇಶಗಳ ಕಾಲ ದ್ವಾಪರಯುಗದ ನಂತರವಾದರೂ, ಸ್ಥಳ ಕಾಲ್ಪನಿಕವೆಂದೆ ಹೇಳಬೇಕು.

# ಪೂರ್ವಗಾಥೆ

ಕೃಷ್ಣ:

ಸುಯೋಧನಾ.. ಏಳು, ಕುರುವಂಶದ ರಾಜನಾಗಿ, ಕರ್ಣನಂಥವನ ಸ್ನೇಹಕ್ಕಾಗಿ, ರಣರಂಗದಲ್ಲಿಯೇ ವೀರ ಮರಣವನ್ನಪ್ಪಿದ ನಿನ್ನೊಡನೆ ಸಗ್ಗದಲ್ಲಿ ಸಖ್ಯಕ್ಕೆ ನಿನ್ನವರಲ್ಲೊಬ್ಬರನ್ನು ಆರಿಸಿಕೋ. ಕುರುಕ್ಷೇತ್ರದಲ್ಲಿ ನಡೆದ ಧರ್ಮ ಯುದ್ಧದಲ್ಲಿ ಭಾಗಿಯಾದ ಯಾರಾದರೂ ಸರಿ; ನಿನ್ನಿಚ್ಛೆಯಂತೆ ನಿನ್ನೊಡನೆ ಕರೆದುಕೋ.

ಸುಯೋಧನ:

ಇದೇನಿದು ಅಚ್ಚರಿ? ಪಾರ್ಥ ಸಖ, ಮರ್ತ್ಯದ ದುರ್ಯೋಧನ ಸಗ್ಗದಲ್ಲಿ ನಿನಗೆ ಸುಯೋಧನನೇ?

ಕೃಷ್ಣ:

ರಾಜನ್, ಮರ್ತ್ಯದಲ್ಲಿ ನಡೆದ ಕೃತ್ಯಗಳನ್ನು ಕಡೆಗಾಣಿಸಿ ಇಂದ್ರನ ಅರಮನೆಗೆ ಆಮಂತ್ರಣ ಸಿಕ್ಕಿದ್ದು ಕುರುಕುಲದ ಕುವರ ಸುಯೋಧನನಿಗೇ. ಗಾಂಧಾರಿಯ ಯೋನಿಜನಾದ ದಿನದಿಂದಲೇ ಅಮರಾವತಿಗೆ ನಿನ್ನ ಆಮಂತ್ರಣ ನಿಗದಿಯಾಗಿತ್ತು. ಬದುಕಿನಲ್ಲಿ ನೀ ನಡೆಸಿದ ಕಾರ್ಯಗಳೆಲ್ಲಾ ರಾಜಕಾರಣದ ಆಶ್ರಯದಲ್ಲಿ ಸಿದ್ಧಿಯಾದವು. ರಾಜತ್ವದ ಆಶ್ರಯದಲ್ಲಿ, ಕೌರವೇಶ್ವರನೆಸಗಿದ ಕಾರ್ಯಗಳಿಗೆ ಬಣ್ಣವಿಲ್ಲದೆ ಹೋಯಿತು ಸುಯೋಧನ. ಇರಲೇನಂತೀಗ, ಅದೇ ರಾಜತ್ವದ ಅಡಿಯಲ್ಲಿ ನಿನ್ನೊಡನೆ ಅಮರಾವತಿಗೆ ಜೊತೆಯಾಗಲಿನ್ನೊಬ್ಬರಿಗೆ ಅವಕಾಶವುಂಟು. ನೀನೇ ಹೇಳು, ಯಾರು ಬೇಕು?

ಭಾನುಮತಿ? ರಂಭೆ ಮೇನಕೆಯರ ನಡುವೆ ಸರಸಕ್ಕೆ ವೇಳೆ ಸಿಕ್ಕೀತೆ ನೋಡು? ನಿನ್ನೊಳಗಿನ ತಾಮಸ ಮನಸ್ಸಿಗೆ ಸಾಕಷ್ಟು ಆಹಾರ ಒದಗಿಸಿದ ದುಶ್ಯಾಸನನಾದರೂ ಸರಿಯೆ; ಪ್ರಾಣ ಸ್ನೇಹಿತ ಕರ್ಣ ಅವನದೇ ಪುಣ್ಯ ಫಲಗಳಿಂದ ಸ್ವರ್ಗಕ್ಕೆ ಬಂದರೂ, ನಿನ್ನ ಆಶ್ರಯದಲ್ಲಿ ಬಂದಂತಲ್ಲ ನೋಡು.

ಇರಲಿ, ಕಳೆದ ಮಾತುಗಳೇಕೀಗ? ನಿನ್ನೊಡನಾಟಕ್ಕಾರು ಬೇಕು ಹೇಳು?

ಸುಯೋಧನ:

ಕುರುಕ್ಷೇತ್ರದ ಸಾರಥಿ, ಸಕಲ ಜ್ಞಾನಿಯಾದ ನಿನಗೆ ತಿಳಿಯಲೊಲ್ಲದೆ? ತೀರ್ಥರೂಪ ಸಮಾನರಾದ 'ಶಕುನಿ' ನನ್ನೊಡನಿರಲಂತೆ.

ಕೃಷ್ಣ:

ಭಲೆ ಭಲೆ, ನನಗಚ್ಚರಿಯಲ್ಲದಿದ್ದರೂ, ಭವಿತವ್ಯಕ್ಕೆ ಅಚ್ಚರಿ ಹುಟ್ಟಿಸುವ ನಿರ್ಣಯವಿದು ರಾಜನ್, ನನಗೆ ಅಭ್ಯಂತರವೇನಿಲ್ಲ; ಮನುಷ್ಯರ ಕುತೂಹಲಕ್ಕಾಗಿ ನಿನ್ನ ಕಾರಣಗಳನ್ನು ತಿಳಿಸಲಭ್ಯಂತರವಿಲ್ಲವಷ್ಟೆ!

ಸುಯೋಧನ:

ಅಭ್ಯಂತರವೆಂತು ಕೃಷ್ಣ? ತಂಗಿಯಂತಿದ್ದ ದ್ರೌಪದಿಯ ಸಹಾಯಕ್ಕೆ ಎಳಸಿದ ನಿನಗರ್ಥವಾಗುವುದೇನೂ ಕಷ್ಟವಲ್ಲ. ನಿಂತ ಕಾಲಿನಲ್ಲಿ ಮಾತೃಶ್ರೀಯಾದ ಗಾಂಧಾರ ಕುವರಿಯನ್ನು ಮುತ್ತು ಮಾಣಿಕ್ಯಗಳ, ಸಿರಿ ಸಂಪತ್ತಿನ ಕಾಣಿಕೆಗಳ ಆಮಿಷವೊಡ್ಡಿ, ಅಂಧನಾಗಿ ರಾಜಾರ್ಹನಲ್ಲದ ನನ್ನ ತೀರ್ಥರೂಪರಿಗೆ ಕಾಣಿಕೆಯೆಂಬಂತೆ ಕೊಡ ನೋಡಿದ್ದ ಆಚಾರ್ಯ ಭೀಷ್ಮರ ಕುತಂತ್ರಕ್ಕೆ ತಂಗಿಯ ಸಂಸಾರ ಬಲಿಯಾಗದಂತೆ ನೋಡಿಕೊಂಡ ಸಹೋದರನ ಪ್ರೀತಿ ಶಕುನಿ ಮಾವನದ್ದು. ಆ ಪ್ರೀತಿಗಾಗಿ ತನ್ನ ಪಟ್ಟವನ್ನು ತೊರೆದು, ನನ್ನನ್ನು ಹಸ್ತಿನೆಯ ಸಿಂಹಾಸನದಲ್ಲಿ ಕುಳ್ಳಿರಿಸಿ ಕಾವಲಿದ್ದ ತೀರ್ಥ ರೂಪ ಸಮಾನರು ಶಕುನಿ. ಈ ಸುಯೋಧನನ ವಿರುದ್ಧ ಭರತವರ್ಷದಲ್ಲಿ ನಡೆದ ಎಲ್ಲ ಕುಟಿಲೋಪಾಯಗಳಿಗೆ ಮಂತ್ರಾಲೋಚಿಸಿ ಉತ್ತರ ಕೊಟ್ಟ ಕುರುಕುಲ ನಿಷ್ಠರೆಂದರೆ ಶಕುನಿ.

ಅಷ್ಟೇ ಅಲ್ಲ ಕೃಷ್ಣ; ನೂರು ಮಂದಿ ಸಹೋದರರಿದ್ದೂ, ಕರ್ಣನಂತಹ ಸಖನಿದ್ದೂ, ದಕ್ಕದ ರಾಜ್ಯವನ್ನು, ಕೊನೆಗೆ ಅವರುಗಳಿದ್ದೂ ಉಳಿಸಿಕೊಳ್ಳಲಾಗದ ಹಸ್ತಿನೆಯನ್ನು ಹದಿಮೂರು ವರ್ಷ ಕಾಲ ನಿರಾತಂಕದಿಂದ ಆಳಿದ್ದರೆ, ಶಕುನಿಯಿಂದಾಗಿ. ಹಿಂದಿಲ್ಲ, ಮುಂದೆ ಗೊತ್ತಿಲ್ಲ ಎನ್ನುವಷ್ಟು ಅಪೂರ್ವ ಸೌರಭದಿಂದ ಕೂಡಿದ್ದ ಸಂಪದ್ಭರಿತ ಹಸ್ತಿನೆಯನ್ನು ಆಳಿದ ಭಾಗ್ಯ ನನ್ನದಾಗಿದ್ದು ಶಕುನಿ ಮಾಮನಿಂದ.

ನನ್ನ ರಾಜತ್ವಕ್ಕೆ ಕಾರಣೀಭೂತನಾಗಿ ತನ್ನ ರಾಜತ್ವ ತ್ಯಾಗ ಮಾಡಿದ, ತೀರ್ಥ ರೂಪರಿಗಿಲ್ಲದ ಎರಡು ಕಣ್ಣುಗಳ ಜಾಗದಲ್ಲಿ ಎರಡೇಕೆ, ನಾಲ್ಕು, ಎಂಟು, ಹದಿನಾರು ಕಣ್ಣುಗಳಾಗಿ ಕುರುಕುಲವನ್ನು ಕಾಯ್ದ ಪಿತೃಸಮಾನರು ಶಕುನಿಯಷ್ಟೆ?

ಕೃಷ್ಣ:

ಭಲೆ ಕೌರವೇಶ್ವರಾ! ಸಂಬಂಧಗಳ ಬಗೆಗಣ ಈ ನಿಷ್ಠೆ ಮೆಚ್ಚುವಂತ ಹದ್ದು. ತಥಾಸ್ತು ಸುಯೋಧನಾ.

# ಸಂಧ್ಯಾಗಾಥೆ

ಶಕುನಿ:

ಅಮರತ್ವ! ಶಕುನಿಯಂತಹ ಶಕುನಿ ಮಾವನಿಗೂ ಅಮರತ್ವ! ಕುರುಕುಲದ ಕುವರ ಶ್ರೇಷ್ಠ, ಮಗು, ದುರ್ಯೋಧನನ ನಿಷ್ಠೆಯ ಭಿಕ್ಷೆಯಿದು. ನೂರು ಮಂದಿ ಸಹೋದರರನ್ನು ಉಪೇಕ್ಷಿಸಿ ನನಗಾಗಿ ಕೃಷ್ಣನಿಂದ ಪಡೆದ ಭಿಕ್ಷೆ. ಅಕ್ಷೋಹಿಣಿಗಟ್ಟಲೆ ಸೈನ್ಯವಿದ್ದೂ ಕಳೆದುಕೊಂಡ ಹಸ್ತಿನಾವತಿಯ ನೆನಪುಗಳ ನಡುವೆ, ಕೇವಲ ದಾಳಗಳ ಮೇಳದಲ್ಲಿ, ಜೂಜಿನ ಮೋಹ ಜಾಲದಲ್ಲಿ ಅತಿರಥ ಮಹಾರಥಿಗಳನ್ನು ಕಟ್ಟಿ ಹಾಕಿ ಪಡೆದುಕೊಂಡ ಇಂದ್ರಪ್ರಸ್ಥದ ನೆನಪಿಗೆ, ಮಗು ನನಗೆ ಕೊಟ್ಟ ಕಾಣಿಕೆ... (ಅನುಮಾನದಿಂದೆಂಬಂತೆ) ನಿಜವಾಗಿಯೂ? ಅಥವಾ.. ತುಂಬಿದ ಸಭೆಯಲ್ಲಿ ಮಾನ ಕಳೆದನೆಂಬ ಕೋಪಕ್ಕೆ ಧರ್ಮಜನಿತ್ತ ಶಾಪವೇ ಇದು!

ಛೇ, ಧರ್ಮದ ಶುಷ್ಕ ಸೂಕ್ಷ್ಮತೆಯಲ್ಲಿ ಮುಳುಗಿದವನಿಗೆ ಶಾಪದಂತಹ ವ್ಯಂಜನವೊಂದರ ರುಚಿಯೆಲ್ಲಿ ತಿಳಿಯಬೇಕು?..ಹಾ... ಆದರೆ ಕೃಷ್ಣೆ! ತುಂಬಿದ ಸಭೆಯಲ್ಲಿ ತನ್ನದೇ ಐವರು ಪತಿಗಳನ್ನು ನಿರ್ವೀರ್ಯ ರನ್ನಾಗಿಸಿದಂಥ ಆ ಘಳಿಗೆಯ ನೋವಿನ ಶಮನಕ್ಕಾಗಿ; ಹೌದು, ತನ್ನ ದೈವ-ಸಖ ಕೃಷ್ಣನ ಸಹಾಯದಿಂದ ಶಕುನಿಗೊಗ್ಗದ ಈ ಸಪ್ಪೆಯ ಚಿರಂಜೀವತ್ವ ದೊರಕಿಸಿರಬೇಕು. ಕಪ್ಪಿನ ಮಗುವಾದ ಶಕುನಿಗೆ ಕತ್ತಲಿನ ಛಾಯೆಯೂ ಸಿಗದಂತಹ ಮೋಕ್ಷದ ಬದುಕು.

ಆದರೆ, ತಾಯಿ, ನಿನ್ನ ಅಂದಿನ ಸ್ಥಿತಿಗೆ ನೀನೇ ಕಾರಣವೆಂದರಿಯೆಯಾ? ಹಸ್ತಿನಾವತಿಗೆ ಮುಕುಟಪ್ರಾಯಳಾದ ನಿನ್ನನ್ನು ಮರೆಯಲಿಕ್ಕೆ ಅದಾವ ರಾಜರಿಗೆ ಸಾಧ್ಯವಿತ್ತು ಹೇಳು? ಅಂತಿದ್ದೂ ಭಾನುಮತಿಗೆ ದ್ರೋಹ ಬಗೆಯದ ದುರ್ಯೋಧನನ ಮನಸ್ಸರಿಯೆಯಾ ನೀನು? ಪ್ರಾಣ ಸ್ನೇಹಿತ ಕರ್ಣನನ್ನು ನೀನು ತಿರಸ್ಕರಿಸಿದ ನೋವಲ್ಲದಿದ್ದರೆ, ಕುರುಕ್ಷೇತ್ರದಲ್ಲಿ ಯಮಯಜ್ಞ ನಡೆಯುತ್ತಿರಲಿಲ್ಲವೇನೋ!. ನನಗೋ, ದಾಳಗಳ ಸೂತ್ರಕ್ಕೆ, ರಾಜಸೂಯದ ಫಲ ಅಷ್ಟೇಕೆ ರಾಜ್ಯಾಂಗ ಸೂತ್ರಗಳೆಲ್ಲ ಮಣಿಯುವ ಆ ಕ್ಷಣದ ಮತ್ತಿನಲ್ಲಿ ಇನ್ನೇನೂ ಕಂಡಿರಲಿಲ್ಲ. ಹರೆಯ ಕಳೆದು ಹೋದ ಕಾಲ. ಅಂತಃಪುರದಲ್ಲಿ ತೃಪ್ತವಾಗುವ ನನ್ನಂಥವರ ದಾಹಕ್ಕೆ ನಿನ್ನ ಸ್ಥಿತಿ ತಿಳಿಯದೇ ಹೋಯಿತು. ಆದರೆ, ಕುರುಕ್ಷೇತ್ರದಲ್ಲಿ ನಡೆದ ಬಲಿಯ ನಂತರವೂ ಹಿಂಗದ ನಿನ್ನ ಕೋಪದಾಹಕ್ಕೆ, ಶಕುನಿಗೀಪರಿಯ ಶಿಕ್ಷೆ ಕೊಟ್ಟೆಯೇನು?

Ia Nataka

(ಇಲ್ಲಿ ಒಂದು ಫ್ಲಾಷ್‌ಬ್ಯಾಕ್ ದೃಶ್ಯವಿದ್ದರೆ; ಸಂಭಾಷಣೆಗೆ ಒಂದು ವಿರಾಮ ಸಿಗುತ್ತದೆ; ಯುದ್ಧದ ಕ್ಲೈಮಾಕ್ಸ್‌ದೃಶ್ಯಗಳನ್ನು ಹಿನ್ನೆಲೆಯಲ್ಲಿ ತೋರಿಸಬಹುದು ಸುಮಾರು ೨೦–೩೦ ಸೆಕೆಂಡ್)

ಶಕುನಿ:

ಅನಂತ ಕಾಲಕ್ಕೂ ರಾಗ ದ್ವೇಷಗಳ ಲಾಲಿತ್ಯಮಯ ಲಯವಿಲ್ಲದೆ, ಸೋಲು ಗೆಲುವುಗಳ ಭೇದವಿಲ್ಲದೆ, ಬರಿಯ ನೆನಪುಗಳಲ್ಲಿನ ಜೀವಂತ ಬದುಕನ್ನು ಮೆಲುಕು ಹಾಕುತ್ತಾ ಹಸ್ತಿನೆಂಬಲ್ಲಿ ಇತಿಹಾಸ ಮರುಕಳಿಸುವುದನ್ನು ನೋಡಬೇಕಾದ ಈ ಸ್ಥಿತಿ ಶಾಪವೇ ಇರಬೇಕು..! ಇಲ್ಲಿ ಕಾಣುವ ಪಾತ್ರಗಳಿಗೆ ಭಾವವಿಲ್ಲ; ಕಪಟಿ ಕೃಷ್ಣ ಅದನ್ನು ತಿಳಿಸಲೇ ಇಲ್ಲ; ಮಗು ದುರ್ಯೋಧನನೊಡನಿರುವ ಮೋಕ್ಷವೆಂದರೆ, ಇನ್ನಿಲ್ಲದ ಸುಖಪ್ರದ ಬದುಕೆಂದು ಭ್ರಮಿಸಿದ್ದೆ ನಾನು.

ಆದರೆ, ದುರ್ಯೋಧನನ ಜೀವಂತ ಮಾತ್ಸರ್ಯ ಇಲ್ಲಿಲ್ಲ; ಅದರ ವಿನಾ ನಗುವ ಸುಯೋಧನನ ಮೊಗದಲ್ಲಿ ನನಗೇಕೋ ಪ್ರಾಣವೇ ಕಾಣಿಸುವುದಿಲ್ಲ. ಶುಷ್ಕ ನಗೆ ಸೂಸುವ ರೀತಿ ನೋಡಿಯೇ ಅವನೊಡನಾಟ ಕಡಿಮೆ ಮಾಡುತ್ತ ಹೋದೆ.

ಇಲ್ಲಿ ಎಲ್ಲ ಕೃಷ್ಣಮಯ! ಕೇಳುವ ದನಿಗೆ ಕೊಳಲಿನ ಇಂಪು, ಛೇ! ನನ್ನ ಕಿವಿಗೋ ಕರ್ಕಶ.. ಶೂಲಸ್ವರೂಪ.
ಸದಾ ಬೆಳಕಿನ ಜಾಗರಣ; ಸೂರ್ಯನಿಲ್ಲದೆಯೂ ಸಿಗುವ ಅವನ ಕಿರಣಗಳ ಪುಂಜ; ಕತ್ತಲಿಗಾಗಿ ಕನವರಿಸಿದ ಕ್ಷಣಗಳೆಷ್ಟೋ! ನಿದ್ರೆಯಲ್ಲದ ನಿದ್ರೆಯಲ್ಲಿ ಕನಸಿದರೂ ಸಿಗದ ತಮಸ್ಸು. ನಿಧಾನವಾಗಿ ಅಭ್ಯಾಸವಾಗಿ ಹೋಗುವಂತಿದೆ. ಈ ಯುಗಾಂತ್ಯವಾಗುವಷ್ಟರಲ್ಲಿ, ಶಕುನಿಯೂ ಇಲ್ಲಿ ಮುರಳಿಲೋಲ ಗೋಪಾಲನ ಗೋಪಿಕಾ ಸ್ತ್ರೀಯರಲ್ಲೊಬ್ಬನಾಗಿ ಬಿಡುತ್ತಾನೇನೋ?
(೧೦– ೨೦ ಕ್ಷಣ ಸುಮಧುರ ಸಂಗೀತ ಕೇಳಿ ಬರುತ್ತದೆ; ಅದರಿಂದ ತಪ್ಪಿಸಿಕೊಳ್ಳಬೇಕೆನ್ನುವಂತೆ ಶಕುನಿ) ಛೇ; ಏಳು ಮನಸ್ಸೇ ಏಳು. ಸೂರ್ಯ ರಶ್ಮಿ ಹೊಗಲಾರದಂತಹ ಕ್ಷಣವ ಕನಸು. ಅಲ್ಲಿ ದಾಳಗಳೊಡನೆಯಾದರೂ ಮಾತನಾಡುವಾ, ಅವುಗಳ ರಂಗಿನಲ್ಲಾದರೂ ಕಪ್ಪಿದೆಯೋ ನೋಡೋಣವಂತೆ!

(ಒಂದು ಕ್ಷಣ ಹಿನ್ನೆಲೆಯಲ್ಲಿ ಪಗಡೆಯಾಟದ ದೃಶ್ಯ ತಂದರೆ ನಾಟಕಕ್ಕೆ ಪೋಷಣೆ ಸಿಗುತ್ತದೆ)

ಪಗಡೆಯಾಟ, ಹೌದು ಅದನ್ನೆ ಏಕೆ ಬಯಸಿದೆ? ವ್ಯಾಸ ನೀನದೆಷ್ಟು ಕ್ರೂರಿ; ಮಹಾಭಾರತವನ್ನೇನೋ ಬರೆದೆ. ಆದರೆ ನನ್ನನ್ನೇಕೆ ಕಪಟಿಯಾಗಿ ಚಿತ್ರಿಸಿದೆ? ಚಲಿಸುವ ದಾಳಗಳ ಕೋಲಾಹಲದ ಲಯ, ತಾಳ, ಆ..ಹ್.. ಅವುಗಳ ನಿಯಂತ್ರಣದ ಸವಿ ನಿನಗೆ ತಿಳಿಯಲಿಲ್ಲವೆ? ಸಾಹಿತ್ಯದ ಸವಿಯೂಡಿಸುವ ನಿನಗೆ ಪಗಡೆಯ ಮಾಂತ್ರಿಕನ ಸವಿಯಡುಗೆ ರುಚಿಸಲಿಲ್ಲವೆ?

ಅಷ್ಟಕ್ಕು, ಮಂಗು ದುರ್ಯೋಧನನ ಅಂತರಂಗದ ರೋದನಕ್ಕೆ ಕಿವುಡಾಗಿಸಿದೆಯಲ್ಲ ಭಾರತದ ಸಕಲ ಜನ ವರ್ಷವನ್ನು; ಭಲಿರೇ ವ್ಯಾಸ, ಮೋಸವೆಸಗಿಯೂ ಜನ ಮಾನ್ಯನಾದ ನೀನು ಧನ್ಯ. ಹೌದು!, ಭರತವರ್ಷದಲ್ಲಿ ನಡೆದ ಯಾವ ಮೋಸಕ್ಕೂ ಕಡಿಮೆಯಲ್ಲದ ಮೋಸವೆಸಗಿದೆಯಲ್ಲಾ ಕಪಟಿ ಕೃಷ್ಣನನ್ನ ಎತ್ತಿ!

ಧರ್ಮಾಧರ್ಮಗಳ ನಿಯಮಕ್ಕಿಂತ ಸರಳವಾದ ನಿಯಮ ಪಗಡೆಯಾಟದ್ದು. ಒಪ್ಪಿದ ಪಂಥಕ್ಕೆ ಸರಿಯಾಗಿ, ಉರುಳಿದ ದಾಳಕ್ಕೆ ಸರಿಯಾದ ನಡೆ; ಇತಿಹಾಸದ ಭಾರದಿಂದ ಬಗ್ಗಿದ ಧರ್ಮವೆಂಬ ಅಪೂರ್ಣತೆಯ ಚೌಕಟ್ಟಿನಲ್ಲಿ ನೋಡಿದಂತಲ್ಲ. ಆದರೂ ಚಂಚಲ ಮನಸ್ಸಿನ ಅತಾರ್ಕಿಕ ನಿರ್ಣಯಕ್ಕೆ ಜನಮಾನ್ಯತೆ ಕೊಡಿಸಿ ಅವರನ್ನ ತಪ್ಪು ದಾರಿಗೆಳೆದೆಯಲ್ಲಾ... ಮಾಧವನ ಷಡ್ಯಂತ್ರದ ಮೂಲಕ. ಅತಿರಥ, ಮಹಾರಥರೆನಿಸಿದ ಪಾಂಡವರನ್ನ ತುಂಬಿದ ಸಭೆಯ ನಡುವೆ ನಿರ್ವೀರ್ಯರನ್ನಾಗಿಸಿದೆಯಲ್ಲಾ ದ್ರೌಪದಿಯ ಮಾನ ಉಳಿಸಿ!

(ವಸ್ತ್ರಾಪಹರಣದ ದೃಶ್ಯ, ಫ್ಲಾಷ್ ಬ್ಯಾಕ್‌ನಲ್ಲಿ)

ದುಶ್ಶಾಸನ:

(ಅಟ್ಟಹಾಸದ ಕೇಕೆ ಮತ್ತು ವ್ಯಂಗ್ಯ ತುಂಬಿ): ಹೇ ದ್ರುಪದ ಪುತ್ರಿ, ಹಸ್ತಿನಾವತಿಯ ನೀರೆ, ಪಾಂಡವರ ಜಾರೆ, ನೀನೀಗ ಈ ಪುರಿಗೇ ಜಾರೆ. ಬಾರೆ, ಬಾ ಬಾರೆ. ತೊರೆಯೇ ನಿನ್ನೀ ಹಳೆಯ ಪರೆ. ತೊಡುವೆಯಂತೆ ನಮ್ಮಯ ನವ್ಯ ನಯನಯ ಪರಿಭಾರೆ.

ದ್ರೌಪದಿ:

ಹೇ ಸಂಬಂಧಿ, ಎನ್ನಯ ರಮಣರ ಅನುಜನಲ್ಲವೆ ನೀನು. ಶ್ರೇಷ್ಠ ಭರತ ವಂಶದ ರಕ್ತ ನಿನ್ನಲ್ಲೂ ಹರಿಯುತ್ತಿಲ್ಲವೆ? ಇದೇನೀ ಅಸಹ್ಯ ಪರಿ ನಿನ್ನದು, ಯಾವ ವಂಶಕ್ಕೂ ಯೋಗ್ಯವಲ್ಲದ್ದು.
(ದ್ರೌಪದಿಯ ಮೇಲೆ ಬೆಳಕಿದ್ದರೆ, ರಂಗದ ಉಳಿದೆಡೆ ಕತ್ತಲು ಅಥವಾ ಮಂದ ಬೆಳಕು)

ಅದಾವ ಜನ್ಮದ ಪಾಪರೂಪವೆನ್ನಲಿ, ಇಲ್ಲ ಅದೆಷ್ಟು ನಾರಿಯರ ತೃಷೆಯ ಶಾಪವೋ. ಐದು ಜನ ಪುರುಷರ ಪತ್ನಿಯಾಗುವುದಕ್ಕಿಂತ, ರಾಜ್ಯಗಳ ರಾಣಿಯಾಗುವುದಕ್ಕಿಂತ, ಒಬ್ಬ ಪ್ರಿಯಕರನ ಅಪ್ಪುಗೆಯಲ್ಲಿ ನಲುಗಬೇಕೆಂದಿದ್ದರೆ ನನ್ನ ಕನಸು ಹೀಗೇಕಾಯಿತು. ತಿಳಿಯದೆಯೋ ಅದಾವ ಚಕೋರಗಳ ವಿರಹಕ್ಕೆ ಕಾರಣನಾದೆನೋ, ಅವುಗಳ ಶಾಪವಿರಬೇಕು ನನ್ನ ಈ ಸ್ಥಿತಿ.

(ಧರ್ಮಜನ ಮೇಲೆ ನಸುಮಾತ್ರ ಬೆಳಕಿದ್ದು ಅವನ ಮುಖದಲ್ಲಿ ಸೋಲು ಮತ್ತು ವಿಷಾದದ ಭಾವ)

ಹೇ ಧರ್ಮಜ, ಇದೇನು ಈ ವೈಪರೀತ್ಯದ ನ್ಯಾಯ ನನ್ನ ವಿಷಯದಲ್ಲಿ? ನನ್ನಿಂದಲೇನಾದರೂ ಕೊರೆಯೆ ನಿಮ್ಮ ಸೇವೆಯಲ್ಲಿ. ಯಾವ ವಂಶಕ್ಕೆ ಶೋಭೆ ತಂದೀತು ಈ ಪರಿ. ಸ್ತ್ರೀ ಧರ್ಮವನ್ನು ಮರೆತರೂ, ಅದಾವ ರಾಜಧರ್ಮವಿದು ಹೇಳಿ. ಈ ಪರಿಯ ನಿರ್ಲಜ್ಜ ಅಧರ್ಮವೆಂದು ತಿಳಿಸಲಾರಿರಾ ಈ ಸಭೆಗೆ!

ಧರ್ಮಜ:

ಹೇ ದ್ರುಪದ ಪುತ್ರೀ, ತ್ರಿಲೋಕವೀರ ಅರ್ಜುನಜಿತ ವಧು ಶ್ರೇಷ್ಠೆ, ಹಸ್ತಿನಾವತಿಯ ಮುಕುಟ ಶ್ರೇಷ್ಠೆ, ಪಂಚಪಾಂಡವರ ರಮಣಿ, ನಿನ್ನ ಸೇವೆಯಲ್ಲಿ ಲೋಪವಿತ್ತೆಂದರೆ ಅಧರ್ಮವಾದೀತು. ಶೂಲಕ್ಕಿಂತಲು ಹರಿತವೆಂದು ತಿಳಿದೂ ಧರ್ಮವರನ್ನಸಿರುವೆ ರಾಣಿ... ಈ ಬದುಕಿನಲ್ಲಿ; ನಿನ್ನನೀ ಸ್ಥಿತಿಯಿಂದ ಬಿಡುಗಡೆ ಮಾಡುವುದಿದ್ದರೆ ಅದು ಧರ್ಮ ಭಿಕ್ಷೆಯೊಂದೆ. ಕ್ಷಮಿಸು ನನ್ನನ್ನು. ಎಲ್ಲ ಕಳೆದು ಕುಳಿತಿರುವೆ, ನಾನೇನು ಭಿಕ್ಷೆ ನೀಡಬಲ್ಲೆ!

ದ್ರೌಪದಿ:

(ಭೀಮನ ಬಳಿ ಸಾರಿ) ಹೇ ಪ್ರಿಯ, ದ್ವಿತೀಯ ಪಾಂಡವ, ನನ್ನನ್ನು ಪ್ರೀತಿಯಿಂದ ನಲುಗಿಸಿದ ಈ ಬಾಹುಗಳಿಗೆ ನಾನು ಬೇಡವಾದೆನೆ? ಹೃದಯಗಳ ಮೂಕ ಭಾಷೆಗೆ ಭಾವದ ಲಿಪಿ ತೊಡಿಸಿದ ನೀನೂ ಈ ಧರ್ಮದ ಸಿಕ್ಕಿನಲ್ಲಿ ಬಿದ್ದೆಯಾ? ರಾಜರುಗಳ ದಾಳನಾಟ್ಯಕ್ಕೆ ಮೂಕ ಬಲಿಪಶುವಾಗಿಸುವೆಯಾ ನನ್ನನ್ನು? ಹೇಳು. ಅಸುರ ಪ್ರವೃತ್ತಿಯನ್ನೂ ಬೆಚ್ಚಿಸುವ, ಹಿಂಸೆಯಿದು ಪ್ರಿಯ.

ಭೀಮ: (ಭೀತ್ಕಾರದೊಂದಿಗೆ ನಡೆದು ದುಶ್ಯಾಸನನ ಬಳಿಗೆ ಹೋಗೆ ಉಳಿದ ಪಾಂಡವರು ಸೆಳೆದು ತರುವರು.)

ಛೇ, ಧಿಕ್ಕಾರವಿರಲಿ ಈ ವೀರ ಬಾಹುಗಳಿಗೆ; ಧಿಕ್ಕಾರವಿರಲಿ ಈ

ಧರ್ಮಕ್ಕೆ; ರಾಜನಲ್ಲದೆಯೂ ರಾಜಧರ್ಮದಲ್ಲಿ ಬಂಧಿಯಾದ ಈ ರಾಜನನುಜನಿಗೆ ಧಿಕ್ಕಾರವಿರಲಿ. ಎಲವೋ ದುಷ್ಟ ದುಶ್ಯಾಸನ, ನೀನೆಳೆದ ನನ್ನೀ ಪ್ರಿಯೆಯ ಕೇಶವನ್ನು ನೋಡು, ನಿನ್ನ ರಕ್ತದಲ್ಲಿಯೆ ಅದನ್ನು ತೋಯ್ದು ನೇಯುತ್ತೇನೆ. (ಸಭಿಕರತ್ತ ತಿರುಗಿ) ರಾಜನೀತಿಯ ನಿಜವನ್ನು ಕುಟಿಲತೆಯಿಂದ ಬದಲಿಸಿದ ನಿಮ್ಮಗಳ ನಿಜ ಮರ್ಮವನ್ನ ಕಾಲನಿಂದ ಬಚ್ಚಿಡಲಾರಿರೋ; ನೀವೇನು ಕುಲ ಹಿರಿಯರೋ ಇಲ್ಲ ಕುರು ವಂಶದ ಕುರಿಗಳೊ.

(ರಂಗದ ಉಳಿದೆಡೆ ಮಂದ ಬೆಳಕಿದ್ದರೆ, ಭೀಮ ಮಂಡಿಯೂರಿ ಆರ್ದ್ರನಾಗಿ)

ಪ್ರಿಯೆ ಈ ಒಂದು ರಾತ್ರಿ ಕಳೆದು ನಾವು ಬದುಕಿದ್ದರೆ, ನನ್ನ ಪ್ರತಿಜ್ಞೆ ನೆರವೇರಿಸಿಯೇ ತೀರುತ್ತೇನೆ. ಪಂಚಪಾಂಡವರ ರಮಣಿಯಾದ ನೀನೆ ಶತಏಕ ಕೌರವರಿಗೆ ಮೃತ್ಯುವಾಗುವಿಯಂತೆ. ತಾಳಿ ನೋಡುವಿಯಂತೆ; ಈ ಕ್ಷಣದಲ್ಲಿ ಮಾತ್ರ ಕ್ಷಮಿಸು ಪ್ರಿಯೆ.

ದ್ರೌಪದಿ:

ಪಾಂಡು ಪುತ್ರ ಭೀಮನಿಂದ ತಾಳ್ಮೆಯ ಮಾತು, ಇದೆಂಥ ದುರ್ದೆಶೆ ನನ್ನದು!

(ಅರ್ಜುನನತ್ತ ಸಾಗಿ)

ಹೇ ಪಾರ್ಥ; ತ್ರಿಲೋಕವೀರನಾಗಿಯೂ, ಸಮ್ಮತವೆ ನಿನಗಿದು. ನಿನ್ನ ರಥದ ಪಥದಲ್ಲಿ ಬಂದುದನ್ನೆಲ್ಲಾ ಕಾಪಾಡಬಲ್ಲ ನಿನಗೂ ಸಾಧ್ಯವಿಲ್ಲವೆ, ನಿನ್ನ ಜೀವನದ ಪಣವನ್ನು ಕಾಪಾಡುವುದು.

ಅರ್ಜುನ:

ಹೇ ಪಾಂಚಾಲೆ, ನಿನ್ನ ಗೆಲಿದು ಹಂಚಿಕೊಂಡೊಡನೆಯೆ ನಿನಗೆ ಐದು ಜನ ರಕ್ಷಕರಿದ್ದಾರೆಂದುಕೊಂಡಿದ್ದು ನನ್ನಯದೆ ತಪ್ಪು. ಹತ್ತು ಕ್ಷಣದಲ್ಲೇ ನೂರು ಬಾಣಗಳಿಂದ ಕೌರವ ಸಂಹಾರ ನಡೆಸಿಯೇನು.

ಆದರೆ:.. ಈ ಮಧ್ಯಮನ ಅಸಹಾಯಕತೆ ತಿಳಿಯದೆ ನಿನಗೆ. ರಾಜನೀತಿಗೆ ಸಲ್ಲದು, ಅಗ್ರಜನ ಆಜ್ಞೆ ಮೀರಲಾರೆ.

ಅಯ್ಯೋ ಸ್ವಪ್ನದಲ್ಲೂ ಸಹಿಸಲಾರದ ಈ ದುಃಸ್ಥಿತಿ ರಾಜರಿಗೇ ಮೀಸಲಾಗಿರಬೇಕು. ಇದ್ಯಾವ ಭಯಂಕರ ಸ್ವಪ್ನವೋ ನಾನರಿಯೆ!

(ದ್ರೌಪದಿ ನಕುಲ ಸಹದೇವರಲ್ಲಿ ಹೋಗುತ್ತಿದ್ದಂತೆಯೆ)

ನಕುಲ/ಸಹದೇವ:

ದೇವಿ, ನಿರ್ವೀರ್ಯರಾಗಿದ್ದೇವೆ. ಸುಖದುಃಖಗಳಲ್ಲಿ ನಾವೆಂದೂ ನಿನ್ನ ಬಳಿಯಿರುತ್ತೇವೆ. ಸಾವು ಬೇಕೆಂದಿದ್ದರೆ ಹೇಳು ದೇವಿ ಹೆದರುವುದಿಲ್ಲ ನಾವು; ನಿನ್ನಯ ಜೊತೆಗಿದ್ದೇವೆ. ಅತಿರಥ ಮಹಾರಥಿಗಳಾದ ಅಗ್ರಜರೇ

ಸುಮ್ಮನಿದ್ದಮೇಲೆ ನಮಗೆ ಬೇರೇನೂ ಅರಿವಿಗೆ ಬರದು.

(ದೀಪ ಮಂದವಾಗಿ ಕ್ಷೀಣಿಸಿ ಮತ್ತೆ ವರ್ತಮಾನದ ಕೃಷ್ಣ/ಶಕುನಿಯರ ಮೇಲೆ ಬೀಳುತ್ತದೆ)

ಶಕುನಿ:

ನಿನ್ನ ಮೂಗಿನ ನೇರಕ್ಕೆ ಕಂಡದ್ದನ್ನೆ ಧರ್ಮವೆಂದಾನಿಸಿ, ೧೮ ಅಕ್ಷೋಹಿಣಿ ಸೈನಿಕರನ್ನು ಬಲಿಗೊಟ್ಟೆಯಲ್ಲಾ! ಅಕಟಕಟಾ.. ಮಾಧವಾ, ನಾನಾಡಿದ್ದು ಪಗಡೆಯುದ್ಧ; ಹನಿ ರಕ್ತ ಹರಿಸದೆಯೆ, ಸಂಪದ್ಭರಿತ ಹಸ್ತಿನಾಪುರಿಯ ಸಿಂಹಾಸನವನ್ನು ಮಗು ದುರ್ಯೋಧನನಿಗೆ ಕೊಡಿಸಿದ್ದೆ; ಧರ್ಮರೂಪಿ ಯುಧಿಷ್ಠಿರನೇ.. ಸೈ ಎನ್ನುತ್ತಿದ್ದನಲ್ಲಾ..! ಕೇಶವಾ.. ಲೆಕ್ಕ ತಪ್ಪುವಷ್ಟು ಜೀವಗಳ ಬಲಿಕೊಟ್ಟು ನೀ ಪಾಂಡವರಿಗೆ ಕೊಡಿಸಿದ್ದು, ಶೋಕಭರಿತ, ಸೂರೆಹೋದ, ವಿಧವೆಯಂತಿದ್ದ ಹಸ್ತಿನಾಪುರದ ಪೀಠವನ್ನ. ಪಾರ್ಥಸಾರಥೀ, ಯುದ್ಧ ಪ್ರವೃತ್ತ ಮನಸ್ಸಿನ ತೃಷೆಯನ್ನ ಪಗಡೆಯಾಟದಲ್ಲಿ ತೃಪ್ತಗೊಳಿಸಿದ ನನಗಿಂತ, ಆಟದ ಮನಸ್ತಾಪವನ್ನು ರಣರಂಗಕ್ಕೆಳೆದ ನಿನ್ನ ಹೆಚ್ಚುಗಾರಿಕೆಯೇನು ಹೇಳೋ.. ಯಾದವೋತ್ತಮಾ...

ಒಡಹುಟ್ಟಿದವಳಂತಿದ್ದ ಕೃಷ್ಣೆ, ದ್ರೌಪದಿಯ ಪಾಡನ್ನು ಎಂದಾದರೂ ಹಿಂತಿರುಗಿ ನೋಡಿದೆಯಾ? ತ್ರಿಲೋಕವೀರ ಅರ್ಜುನನ ಕೈಯಲ್ಲಿ ಅವಳನ್ನು ಗೆಲಿಸಿ ಅನಾಥಳನ್ನಾಗಿಸಿದೆಯಲ್ಲಾ; ಪಂಚಪಾಂಡವರ ಸಹವಾಸದಲ್ಲಿ ಸುಖದಿಂದ ನಲುಗುವಳೆಂದುಕೊಂಡಿದ್ದೆಯಾ ನೀನು! ಸುಳ್ಳು, ಮಾಧವಾ ಸುಳ್ಳು. ಭ್ರಾತೃ ಕಲಹ ನಡೆಯದಿರಲೆಂಬುದಕ್ಕಲ್ಲವೇ ನೀನು ದ್ರೌಪದಿಯ ಬಲಿ ಪಾಂಡವರಿಗೆ ಕೊಟ್ಟದ್ದು. ತ್ರಿಲೋಕಪತಿ ಅರ್ಜುನ, ಅಪ್ರತಿಮ ಸಾಹಸಿ ಭೀಮ ಇವರುಗಳನ್ನು ಸ್ವಯಂ ಪರಾಕ್ರಮಿಗಳಾದರೂ ಸಾಧಾರಣರಾದ ನಕುಲ ಸಹದೇವ, ನಿರ್ವೀರ್ಯನೆಂಬಂತಿದ್ದ ಧರ್ಮಜ ಇವರುಗಳಿಗೆ ಸಮೀಕರಿಸಿದೆಯಲ್ಲಾ.., ಅದಕ್ಕಲ್ಲವೇ, ತನಗೆ ಸಾಟಿಯಲ್ಲದ ಸಹೋದರರ ಪತ್ನಿಯೆಂಬಂತೆ ದ್ರುಪದ ಪುತ್ರಿಯನ್ನು ನಡೆಸಿಕೊಂಡರಲ್ಲಾ ಈ ಅಪ್ರತಿಮ ಸಾಹಸಿಗಳು. ನೀನಾದರೋ ತನ್ಮೂಲಕ, ಒಗ್ಗಟ್ಟಿನಿಂದ ನಿಸ್ಸೀಮರೆನಿಸಿದ ಪಾಂಡವರನ್ನು ನಿನ್ನ ಕೈಗೆ ತೆಗೆದುಕೊಂಡೆಯಲ್ಲಾ ಕೃಷ್ಣ... ಹೇಳು ಸರಿಯೇನು?

(ದ್ರೌಪದಿ ಪಾಂಡವರ ಪ್ರಣಯ ಪ್ರಲಾಪ: ಈ ದೃಶ್ಯದಲ್ಲಿ ಸಂಭಾಷಣೆಯಿಲ್ಲದಿದ್ದರೆ ಚೆನ್ನು. ಮುಖ್ಯವಾಗಿ, ದ್ರೌಪದಿ ಐವರು ಪುರುಷರನ್ನು ಬದಲಾಯಿಸುತ್ತಿದ್ದಾಗಿನ ಭಾವಾವೇಷಗಳನ್ನು ಹಿಡಿಯಬೇಕು; ಒಂದೆರಡು ನಿಮಿಷಗಳಷ್ಟು ಕಾಲಾವಧಿಯಲ್ಲಿ ನೃತ್ಯ ರೂಪದಲ್ಲಿ ತೋರಿಸಿದರೆ ಪ್ರಬಲವಾಗಿ ಬರಬಹುದು. ಮಧುರ ಮೋಹನ

ಸಂಗೀತಕ್ಕೆ ಪಾಂಡವರಲ್ಲಿ ಒಬ್ಬೊಬ್ಬರೊಡನೆಯೂ ಕ್ಷಣಕಾಲ ಉಲ್ಲಾಸದಿಂದ ನೃತ್ಯ ಮಾಡಿ ಇನ್ನೊಬ್ಬರಲ್ಲಿಗೆ ಹೋಗುತ್ತಿದಾಗಿನ ಪಾಂಡವರ ಉತ್ಕಟ ಭಾವಗಳು ಮೂಡಿ ಬರಬೇಕು; ಬೆಳಕು ನಿಧಾನವಾಗಿ ಮತ್ತೆ ಶಕುನಿಯಮೇಲೆ ಬರುತ್ತದೆ)

ಶಕುನಿ:

ಕೌಂತೇಯರಲ್ಲೇ ಜ್ಯೇಷ್ಠನಾದ ಕರ್ಣನೇನು ಮಾಡಿದ್ದ? ಸಕಲ ಜ್ಞಾನಿಯಾದ ನೀನು ಕೃಷ್ಣೆಗೆ ಹೇಳಲಿಲ್ಲವೇಕೆ?, ಕರ್ಣ ಕುಂತೀಪುತ್ರನೆಂದು. ದುರ್ಯೋಧನ ಅನುಭವಿಸಿದ ಅಘಟಿತ ಸ್ನೇಹದಂತೆಯೆ ದ್ರುಪದ ಪುತ್ರಿ ಸಹ ಅಸ್ಖಲಿತ, ಅರ್ಪಣಾಭಾವದ ದಾಂಪತ್ಯವನ್ನು ಅನುಭವಿಸುವುದರಿಂದ ತಡೆದೆಯೇಕೆ? ತ್ರಿಲೋಕಪತಿ ಅರ್ಜುನನಿಗೆ ಬೇಡವಾಗಿದ್ದಲ್ಲಿ ದ್ರೌಪದಿಯನ್ನೇಕೆ ಕಟ್ಟಿದೆ? ಪಂಚಪಾಂಡವರಿದ್ದೂ ವಿಧವೆಯಂತಿರಲೆಂದೇ?

ಮಾಧವಾ... ಮುಂದೆಂದೂ ಕರ್ಣ ಪೌರುಷದಿಂದ ಸ್ತ್ರೀ ಸಹವಾಸಕ್ಕೆಳಸಲಿಲ್ಲವೆಂಬುದು ನೆನಪಿದೆಯ? ಅಂಗರಾಜನಾದರೂ ಚಿಗುರದ ಬಯಕೆಗೆ ನಾಂದಿಯಾದೆಯಲ್ಲೊ; ಕೇಳೆಲೆ ಕೃಷ್ಣ, ಇತಿಹಾಸದ ಚಕ್ರ ತಿರುಗಿ ಬಂದಾಗೊಮ್ಮೆ ಕರ್ಣ ಕೃಷ್ಣೆಯರನ್ನು ಸಂಗಮಿಸುವೆಯಾ.. ದ್ರೌಪದಿಯ ಮೂಕ ವಿರಹದ ಕಿರೀಟವನ್ನು ಕಿತ್ತೊಗೆದು!

ಹೂಂ.,ಸಿಕ್ಕವರ ಸಹವಾಸ ಮಾಡಿದ ನಿನಗೆಲ್ಲಿ ಅರ್ಥವಾಗಬೇಕೋ ಚಕೋರಗಳ ಪ್ರಣಯದ ಪರಿ

(ಇಲ್ಲಿ ದ್ರೌಪದಿ ಸ್ವಯಂವರದ ದೃಶ್ಯ; ಮುಖ್ಯವಾಗಿ, ಕರ್ಣ ಮತ್ಸ್ಯ ಯಂತ್ರವನ್ನು ಬೇಧಿಸಲು ಹೊರಟಾಗ 'ನೀನ್ಯಾರು? ಯಾವ ಕುಲ' ಎಂದು ದ್ರೌಪದಿ ಕೇಳುವುದನ್ನು ತೋರಿಸುವುದಷ್ಟೇ ಮುಖ್ಯ)

ಶಕುನಿ:

ನಾನಾದರೋ ಪಗಡೆಯಾಟದ ದಾಸನಾಗಿ ಪಗಡೆಗಳನ್ನ ನನ್ನ ದಾಸರನ್ನಾಗಿಸಿದ್ದೆ. ಉರುಳುವ ದಾಳಗಳಿಗೆ ನಿನ್ನ ಮನೋಗತವನ್ನ ದಾಟಿಸುವ ಸಂಭ್ರಮವಷ್ಟೇಯೋ ಮಾಧವ, ನನ್ನ ಪರಿ; ಅದಕ್ಕೆ ರಾಜ್ಯಗಳನ್ನೇ ಪಣವಾಗಿಡುವವರಿಗೆ ನಾನೇನು ಹೇಳಲಿ? ದಾಳಗಳೊಡನೆ ಸಂವಾದಿಸುವ ಕ್ಷಣದಲ್ಲಿ, ಮನದಲ್ಲಿ ಬೇರೇನೂ ಇರುವುದಿಲ್ಲವೋ ಕಪಟ ನಾಟಕ ಸೂತ್ರಧಾರಿ, ಸಂವಾದದ ಗುರಿ ಒಂದೇ; ಅದನ್ನು ಮತ್ತಷ್ಟು ಪಕ್ವಗೊಳಿಸುವ ಗುರಿ. ಸೋಲು ಗೆಲುವುಗಳ ಉದ್ದೇಶವಾಗಲೀ ಔಚಿತ್ಯವಾಗಲೀ ಗೊಂದಲವುಂಟುಮಾಡುವುದಿಲ್ಲವೋ ಕೃಷ್ಣ. ಅಂಥನೆಂದು

ಪಿತನಿಂದ ಕಸಿದ ರಾಜ್ಯವನ್ನು ರಾಜಯೋಗ್ಯ ಮಗು ದುರ್ಯೋಧನನಿಂದಲೂ ಕಸಿದದ್ದು ಯಾವ ರಾಜ ನ್ಯಾಯ? ಹುಲಿಯ ಹೊಟ್ಟೆಯಲ್ಲಿ ಹುಟ್ಟಿದ್ದು ನೆನಪಿನಲ್ಲಿರದಿದ್ದರೆ, ಹುಲಿ ಹಸುವಿನೊಡನಿದ್ದೀತು. ಆದರೆ, ಅಭೂತಪೂರ್ವ ಹಸ್ತಿನಾವತಿ ತನ್ನದಾಗಬೇಕಿತ್ತೆಂದು ತಿಳಿದ ಮೇಲೆ ಸುಮ್ಮನಿರುವುದಕ್ಕೆ ನರಜನ್ಮವೇಕೆ? ಹೇಳಲೆ ಕೃಷ್ಣ. ಅಷ್ಟಕ್ಕೂ ನೀನೆಷ್ಟರವನು ಹೇಳು, ಭೀಷ್ಮ ದ್ರೋಣರನ್ನು ಹಸ್ತಿನಾವತಿಯ ಗದ್ದುಗೆಗೆ ಬಂಧಿಸಿದ ರಾಜನೀತಿಯಲ್ಲೇನು ತಪ್ಪಿತ್ತು? ಅವರನ್ನ ಕಪಟ ನೀತಿಯಲ್ಲಿ ಬಂಧಿಸಿ ನೀನು ಸಾಧಿಸಿದ್ದು ನಿನ್ನಯದೇ ಇಷ್ಟಾರ್ಥವನ್ನಲ್ಲವೇ.

"ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ" ಎಂದ ನೀನೇ ಜಯಗಳಿಸಲೋಸುಗ ನಾಟಕವಾಡಿದೆಯಲ್ಲಾ.. ನಾನೆಲ್ಲಂತು ವರ್ತಿಸಿದೆ ಹೇಳು. ಸಂವಾದ.. ಪಾರ್ಥಸಾರಥೀ, ಸಂವಾದ... ಅದೊಂದೇ ನನ್ನ ಕರ್ಮವಾಗಿತ್ತು;
ಜಯಾಭಿಲಾಷೆ ಮಗು ದುರ್ಯೋಧನನದಾಗಿದ್ದರೂ, ಅದನ್ನು ಗಳಿಸುವಲ್ಲಿ ನಾನು ಎಸಗಿದ್ದೆಲ್ಲಾ ಪಗಡೆಯಾಟದ ನಿಯಮದೊಳಗೇಯೆ. ಜಯದ್ರಥನ ರುಂಡ ತರಿದನಲ್ಲಾ ನಿನ್ನ ಸಹಚರ ಪಾರ್ಥ,... ಮುಸ್ಸಂಜೆಯ ಭ್ರಮೆಯುಂಟುಮಾಡಿದ್ದು ನೀನಲ್ಲವೆ!
ಅಸೀಮ ಪರಾಕ್ರಮಿ ಅಭಿಮನ್ಯುವನ್ನು ಚಕ್ರವ್ಯೂಹದ ದ್ವಾರದಲ್ಲಿ ತಡೆದದ್ದು ಯುದ್ಧನೀತಿ ಬಾಹಿರವಲ್ಲವೆಂಬುದು ತಿಳಿಯಲಿಲ್ಲವೋ ನಿನಗೆ?

ಅಷ್ಟಕ್ಕೂ ಕುರುಕ್ಷೇತ್ರದುದ್ಧಕ್ಕೂ ಎರಡೂ ಬಣಗಳೆಸಗುವ ಅಸಂಖ್ಯ ಕುಟಿಲ ನೀತಿಗಳಿಗೆ ಕಾರಣ ನೀನೇಯೋ.. (ಮಾಧವ). ಈಗಲಾದರೂ ತಿಳಿಯಿತೇ?.. ರಂಗವಲ್ಲಿಂಯ ನಡುವೆ, ದಾಳಗಳ ನಾಟ್ಯಕ್ಕೆ, ತಾಳಮೇಳಗಳೊನ್ನದಗಿಸುವ ನನ್ನಲ್ಲೊಂದು ತಪ್ಪಿದ್ದರೆ, ಅದಕ್ಕೆ ನೂರು ನೂರು ತಪ್ಪುಗಳೆನ್ನಸಗಿದೆಯಲ್ಲೋ ಕಪಟ ನಾಟಕ ಸೂತ್ರಧಾರಿ...

"ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ... ಸಂಭವಾಮಿ ಯುಗೇ ಯುಗೇ" ಎಂದೆಯಲ್ಲಾ .. ದ್ವಾಪರದಲ್ಲಿ ಬೇಟೆಯಾಟದಂತಿದ್ದರೆ ಯುದ್ಧ, ಕಲಿಯುಗದಲ್ಲಿ ಸೃಷ್ಟಿ ಲಯಗಳ ಅಂತರ ಕೇಶಕ್ಕಿಂತಲೂ ಸೂಕ್ಷ್ಮವಾಗಿದ್ದೀತೊ ಕೇ..ಶವ. ಕಲಿಯುಗದಲ್ಲಿ ಸಂಭವಿಸುವಾಗ.. ಪಗಡೆಯಾಟವನ್ನು ಕಲಿತುಕೋ, ಮತ್ತೊಮ್ಮೆ ಸಂಭವಿಸಬೇಕೆಂದಿದ್ದರೆ ಈ ಭುವಿಯಲ್ಲಿ. ದ್ವಾಪರದ ತಪ್ಪಿನಿಂದಲಾದರೂ ಕಲಿತುಕೋ ಕೃಷ್ಣ. ಕಲಿಯುಗದಲ್ಲಿ ದಾಳಗಳೆ ಅಸ್ತ್ರ ಸಂಭೂತವಾಗಿದ್ದರೆ, ಜಯಾಪಜಯಗಳ

ನಿಯಂತ್ರಣ ಸುಲಭ ನೋಡು. ಧರ್ಮದ ಹೆಸರಿನಲ್ಲಿ ಕುರುಡು ನಿರ್ಣಯಗಳನ್ನು ಮಾತ್ರ ತೆಗೆದುಕೊಳ್ಳಬೇಡ ತಿಳಿಯಿತೆ!
(ಶಕುನಿ ಸ್ವಯಂ ಅಚ್ಚರಿಯಿಂದೆಂಬಂತೆ) ಹೌದು; ಪಗಡೆಯಾಟವನ್ನೇ ಏಕೆ ಅರಸಿದೆ ನಾನು?
(ಶಕುನಿ ಬಗ್ಗಿ ಸ್ಮೃತಿ ಕಳೆದು ಕೊಂಡಂತೆ, ಜೀವ ಸತ್ವ ಹೋದಂತೆ ನಿಶ್ಚಲನಾಗಬೇಕು)

ಕೃಷ್ಣ:

ಭಲಿರೇ ರಾಜನ್; ಜೀವರಹಿತ ದಾಳಗಳೊಡನೆ ಸಂವಾದಿಸಿ ಸೋತ ನೀನು ಕಾಲನೊಡನೆ ಈಗ ಹಿಮ್ಮುಖವಾಗಿ ಸಂವಾದಿಸುತ್ತಿದ್ದೀಯಲ್ಲಾ! ಮತ್ತೆ ಅದೇ ಜೀವರಹಿತ ಕ್ಷಣಗಳೊಡನೆ. ಭೇಷ್! ರಾಜನ್, ಕಾಲಚಕ್ರನ ಉರುಳುವ ಗತಿ ತಿಳಿದವರಿಲ್ಲ. ಅವನನ್ನು ನಿಯಂತ್ರಿಸುವೆನೆಂದು ಭಗವಂತನೂ ಹೇಳಲಿಲ್ಲ; ಅಕ್ಷೋಹಿಣಿಗಳಿಗು ಮಿಕ್ಕ ಭರತವರ್ಷವಷ್ಟೇ ಅಲ್ಲ, ಅಣುರೇಣು ತೃಣಗಳು ಕೂಡ ಕಾಲನ ಚಕ್ರಕ್ಕೆ ರೇಖುಗಳಾಗಿವೆ. ಕಾಲನ ಗಾಲಿ ಉರುಳಿ, ಉರುಳಿ ಪರಿಕ್ರಮಿಸುವ ಪಥ.. ಅನುದಿನವು ಹೊಸದು. ಕಾಲನ ಪರಿಭ್ರಮಣೆ ಸೃಷ್ಟಿಸುವ ಹೊಸ ಹೊಸ ಜೀವಪಥಗಳಿಗವುಗಳದೇ ನಿಯಮವಿರುತ್ತವೆ.

(ನಿಶ್ಚಲವಾಗಿರುವ ಅಥವಾ ದಾಳಗಳೊಡನೆ ಆಡುತ್ತ ಮಗ್ನನಾಗಿರುವ ಶಕುನಿಯತ್ತ ನೋಡಿ)
ಹಾಗೆಂದೇ ರಾಜನ್ ನಿರ್ಜೀವ ದಾಳಗಳೊಡನೆ ನಡೆಸಿದ ಸಂವಾದದಂತಲ್ಲ ಕಾಲನೊಡನ ನಂಟು; ನೀನೀಗ ನಿರ್ಜೀವ ಕ್ಷಣಗಳೊಡನೆ ಸಂವಾದಿಸಿದೆಯಲ್ಲಾ, ಅದು ಕೇವಲ ನಿನ್ನ ಮನೋವ್ಯೈಥುನವಷ್ಟೆ. ನೀನಿಚ್ಛಿಸಿದ ನಿಯಮಾನುಸಾರದ ಜಗತ್ತು ಕೇವಲ ನಿನ್ನ ಕನಸಿನಲ್ಲಷ್ಟೆ.

(ಕೃಷ್ಣ ಇಲ್ಲಿ ಕನಸುಗಾರನಾಗಬೇಕು) ಮನಸೋಲುವಂತೆ ಮುರಳಿಯನ್ನು ನುಡಿಸಲು ಕಲಿಯಲಿಲ್ಲವೆ ನಾನು!
(ಕೊಳಲ ಗಾನದ ಹಿಮ್ಮೇಳ; ರಾಧೆ ಮತ್ತು ಗೋಪಿಕೆಯರ ನೃತ್ಯ; ಕೃಷ್ಣ ಅವರ ನಡುವೆ ಇದ್ದೂ ಇಲ್ಲದವನಂತೆ ಓಡಾಡಿ ನರ್ತಿಸುತ್ತಾನೆ; ಈ ಸಂದರ್ಭವನ್ನು ನಿರೂಪಿಸಲು ನೃತ್ಯಪಟುಗಳನ್ನಷ್ಟೇ ಬಳಸಿ ನೃತ್ಯದ ಮೂಲಕವೂ ತೋರಿಸಬಹುದು; ಸುಮಾರು ಮೂರು ನಿಮಿಷಗಳಿಗೆ ಮೀರದ ದೃಶ್ಯವಿದು; ಸ್ತ್ರೀ ನೃತ್ಯಕಾರರಷ್ಟೇ ಈ ಸಂದರ್ಭದಲ್ಲಿ

ರಂಗದ ಮೇಲೆ ಬಂದು, ಕೃಷ್ಣ ಅವರೊಡನೆ ಸೇರಿಯೂ ಸೇರದಂತೆ ನೃತ್ಯ ಮಾಡಿದರೆ ಒಳ್ಳೆಯದು)
ಅದಕ್ಕೆ ಮನಸೋತವರು ರಾಧೆ, ರುಕ್ಮಿಣಿ, ಸತ್ಯಭಾಮೆ ಗೋಪಿಯರಷ್ಟೆ; ನನ್ನವನೇ ಭ್ರಾತೃ ಬಲರಾಮನೇ ಒಲಿಯಲಿಲ್ಲವಲ್ಲ; ಸಡ್ಡು ಹೊಡೆದು, ತೊಡೆ ತಟ್ಟಿ, ಕುಸ್ತಿಗೆ ಕರೆದರೆ ಗರಡಿಯ ಮಣ್ಣಿನಲ್ಲಿ ಸೆಣಸಿಯಾನಷ್ಟೆ; ಹೊರತು ಅನುಜನ ಪ್ರೀತಿಯ ತುಣುಕುಗಳನ್ನು ಮುರಳಿಯ ನಾದದ, ಮೌನದ ಕ್ಷಣಗಳ ಮೇಲೋಗರವಾಗಿತ್ತರೆ, ಧೀಕರಿಸಲೂ ಒಲ್ಲದೆ, ಮೋರೆ ತಿರುಗಿಸುತಿದ್ದ. ಸ್ತ್ರೀಲೋಲ ಮುರಳಿ ಗೋಪಾಲನೆಂಬ ಬಿರುದಷ್ಟೆ ಸಿಕ್ಕಿತು ನೋಡು.

ನಿನಗೆ ತಿಳಿಯಲಿಲ್ಲ ರಾಜನ್, ನಿನ್ನ ಮಗು ಆ ದುರ್ಯೋಧನನ ತುಡಿತ.
ದಾಳಗಳು ಉರುಳಿ ಉರುಳಿ ದೊರಕಿಸಿದ ರಾಜ್ಯ ಅವನಿಗೆಂದಿಗೂ ರುಚಿಸಲಿಲ್ಲವೆಂದು ನಿನಗೆ ಗೊತ್ತಿಲ್ಲವೆ?

ಬಿಲ್ಲು ಸೆಟೆದು, ಬಾಣ ಹೂಡಿ ರಕ್ತ ಹರಿಸಿ ನೆಲವ ದಕ್ಕಿಸಿಕೊಂಡ ಸುಖ ಕೌರವನಿಗೆ ದಕ್ಕಲಿಲ್ಲವೆಂದೇ ರಾಜನ್, ಅವನಿಗೆ ತೀರದ ದಾಹ. ವನವಾಸ ಸಹಿಸಿ, ಅಜ್ಞಾತವಾಸ ಮುಗಿಸಿ ಬಂದು, ಸಂಧಿಯಿಂದು ಐದು ಮಂದಿ ರಾಜಯೋಗ್ಯ ಸಂಬಂಧಿಗಳು ಕೇವಲ ಐದು ಊರುಗಳನ್ನು ಕೇಳಿದರೆ ಐದಂಗುಲ ಜಾಗವನ್ನೂ ಪಾಂಡುಪುತ್ರರಿಗೆ ಕೊಡೆನೆಂಬ ಹಟದಿಂದ ಸೆಟೆದು ನಿಂತಾಗಲೂ ತಿಳಿಯಲಾರದೆ ಹೋದೆಯಲ್ಲಾ.

ಶಕುನಿ:

ನೆತ್ತರು ನೀರುಗಳ ಪಾಶ ಹರಿ. ಧಾನ್ಯವೆಂಬಂತೆ ಆಚಾರ್ಯ ಭೀಷ್ಮರು ಅಳೆದು ಕೊಟ್ಟ ಧನಕನಕಗಳನ್ನು ಸ್ವೀಕರಿಸಿದ ಗಳಿಗೆಯಿಂದಲೆ, ತಂಗಿಗಾಗಿರಬಹುದಾದ ಅನ್ಯಾಯದ ಬಗ್ಗೆ ಸಂಶಯ. ಅದಕ್ಕಲ್ಲವೆ ಹೊರಟು ನಿಂತದ್ದು. ನನ್ನ ಬದುಕಿನ ಕಾಲದಲ್ಲಿ ಗಾಂಧಾರವು ಗುಡ್ಡ ಬೆಟ್ಟಗಳಿಂದಿಳಿದು ಯಮುನೆಯ ಉದ್ದಗಲಗಳನ್ನು ಆವರಿಸಿಕೊಳ್ಳುವು ದಕ್ಕಾಗದಿದ್ದಲ್ಲಿ ತಂಗಿಯ ರಕ್ತದ ಮೂಲಕವಾದರೇನಂತೆ ಹಸ್ತಿನಾವತಿಯ ಸಿಂಹಾಸನದ ಮೇಲೆ ನನ್ನದೂ ಎನ್ನಬಹುದಾದ ರಕ್ತ ವಿರಾಜಮಾನ ವಾಗಿರಲೆಂಬ ಆಸೆ.

ಆದರೆ ತಾಯ ರಕ್ತ ಹಂಚಿಕೊಂಡ ಬೀಜದೊಳಗೆಲ್ಲೋ ತಂದೆಯ ರಕ್ತವೂ ಸೇರಿ ಬಿಡುತ್ತದಲ್ಲವೆ? ಗಾಂಧಾರಿಯ ಮೂಲಕ ಅದೆಷ್ಟೋ

ಹೇಳಿ ತಿಳಿಸಿದ್ದೆ, ಯುದ್ಧಕ್ಕೆಳಸದಂತೆ. ರಾಜ ಪೀಠದಿಂದ ಅಣ್ಣ ತಂಗಿಯರ ಮಾತುಗಳನ್ನು ನಿರ್ಲಕ್ಷಿಸಿದವನು ತಂಗಿಯ ಮಗನಿಗಿಂತಲೂ ಹೆಚ್ಚಾಗಿ ಅಂಧ ಧೃತರಾಷ್ಟ್ರನ ಮಗನಾಗಿದ್ದ.

ಕೃಷ್ಣ:

ಬೇಟೆಯಾಡಿ ಹಸಿವು ಬೆಳೆಸಿ ಅದೇ ಬೇಟೆಯಿಂದ ಹಸಿವಿಂಗಿಸುವ ಭಾತಿಗಿನ್ನೊಂದು ಹೆಸರೇ ಕ್ಷತ್ರಿಯಧರ್ಮ. ಶಕುನಿ, ರಕ್ತ ಮಾಂಸ ತುಂಬಿಕೊಂಡು ರಜಸ್ಸಿನ ತೇಜಸ್ಸಿನೊಂದಾಗಿ ಸಮರ ವಿದ್ಯೆ ಕಲಿತದ್ದು ಉಪಯೋಗಿಸದೆ ಜಡ್ಡು ಹಿಡಿಯುತ್ತಿದ್ದಂತಿದ್ದಿರಬೇಕು ನಿನ್ನ ಮಗು ದುರ್ಯೋಧನನಿಗೆ. ಸಡ್ಡು ಹೊಡೆದು ಕೆಣಕಿ ಕೆಣಕಿ ಭೀಮನಿಗೆ ಸೋಲುತ್ತಿದ್ದ ಮುಷ್ಟಿ ಯುದ್ಧದ ಕಣದಲ್ಲಿ ಒಂದೇ ಘಳಿಗೆಗಾದರೂ ಸರಿ, ತನ್ನ ಪಟ್ಟನಲ್ಲಿ ಕೊಸರಿಕೊಳ್ಳುವ ಭೀಮ ಕೊಟ್ಟ ಸುಖದ ಒಂದು ತುಣುಕಿಗೂ ಸರಿಯೆನಿಸಲಿಲ್ಲ, ನಿನ್ನಯ ದಾಳದ ಭಿಕ್ಷೆಯಾಗಿ ಬಂದ ರಾಜ್ಯ. ಅದಕ್ಕೆಂದೇ ರಾಜ, ತೀರದ ದಾಹ ಹಸ್ತಿನಾವತಿಯ ಕೌರವೇಶ್ವರನಿಗೆ, ಯುದ್ಧದಲ್ಲಿ ಜಯಿಸಿಯಾನೆಂಬ ಭ್ರಮೆ ಅವನಿಗಿಂತಲೂ ಹೆಚ್ಚು ನಿನಗಿದ್ದಿರಬಹುದು. ರಕ್ತ ಹರಿಸದೆ ಗಳಿಸಿದ ಪರಿಯಿಂದ ಹಸ್ತಿನಾವತಿ ಅತೃಪ್ತಳಾಗಿದ್ದಂತೆ, ಇನ್ನೇನು ತನ್ನನ್ನು ತೊರೆದು ಬಿಡುವಳೆಂಬ ಭಯ, ಭ್ರಮೆ ಕೌರವೇಶ್ವರನಿಗೆ ತಪ್ಪಲಿಲ್ಲವೆಂದೆ ಹದಿನೆಂಟು ದಿನಗಳ ಯುದ್ಧ ಸಾರಿದನೆಂದು ತಿಳಿಯಲಾರೆಯಾ! ಯುಗಗಳಿಂದ ಹಸಿದಿದ್ದ ಹಸ್ತಿನಾವತಿಯ ತೃಷೆಯಿಂಗಿಸಲೆಂಬಂತೆ, ಅಕ್ಷೋಹಿಣಿ ಲೆಕ್ಕದಲ್ಲಿ ಬಲಿಯಿತ್ತು, ಕಳೆದುಕೊಂಡ, ತನ್ನದಾಗಿದ್ದ ಹಸ್ತಿನಾವತಿಯ ಮೌಲ್ಯ ತಿಳಿದುಕೊಂಡಂತ ತೃಪ್ತಿಯಿದ್ದಿರಬೇಕು ದುರ್ಯೋಧನನಿಗೆ; ಹೇಳಿದ್ದನಲ್ಲಾ, ಧರ್ಮಜನಿಗೆ: 'ಆಳುವೆಯಂತೆ, ವಿಧವೆಯಾದ ಈ ರಾಜ್ಯವನ್ನ, ನಾನು ಅನುಭವಿಸಿ ಸೂರೆ ಹೋದ ಹಸ್ತಿನೆಯನ್ನ, ಮನೆಯೋ, ಮಸಣವೋ ತಿಳಿಯದಂತಿದ್ದ ದೇಶವನ್ನ, ಅದರಲ್ಲಿದ್ದ ರೂಕ್ಷ ಪ್ರಜೆಗಳನ್ನ ಆಳಿಕೋ' ಎಂದು ನಕ್ಕಿರಲಿಲ್ಲವೇ?

(ಶಕುನಿಯಿನ್ನೂ ರಂಗದ ಒಂದೆಡೆ ದಾಳಗಳೊಡನೆ ಮಾತನಾಡುತ್ತಾ ಅಡುತ್ತಿರುತ್ತಾನೆ)

ನಿನ್ನ ದಾಳಗಳು ಗಳಿಸಿದಾಗಿನ ಖುಷಿಗಿಂತ, ಯುದ್ಧದಲ್ಲಿ ಆ ರಾಜ್ಯವನ್ನ ಕಳೆದುಕೊಂಡಾಗಿನ ತೃಪ್ತಿಯೇ ಕೌರವೇಶ್ವರನಿಗೆ ಹೆಚ್ಚು ಸುಖಕರವಾಗಿತ್ತೆಂದರೆ ಬೇಸರಿಸಬೇಡ ರಾಜನ್. ತಿರುಗುವ ಕಾಲನ ಚಕ್ರದ ವೇಗ ಒಂದೇ ಸಮ ಎಂಬ ಭಾವ ತೊರೆಯಲೆಂದೆ, ಆ ಸಾತತ್ಯದ ಬೇಸರ ನೀಗಲೆಂದೋ ಎಂಬಂತಿತ್ತು ಕಾಲನಿಗೆ ಕೌರವನಿತ್ತ ಔತಣದ ಪರಿ.

ಕಾಲನೇ ದಿಗ್ಭ್ರಮೆಗೊಂಡಿದ್ದಾನು ನಡೆದ ತಾಂಡವ ನೃತ್ಯದ ಪರಿ ನೋಡಿ. ಮುಂದೊಂದು ಯುಗವಾದರೂ ಕಣ್ಣು ಮುಚ್ಚಲೊಲ್ಲನಾದ ಕಾಲ. ಮುಚ್ಚಿದರೆ ರಾಚಿಸುವ ರಕ್ತಭಕ್ಷಣದ ತಾಳ. ಕಳೆದುದನ್ನೆಲ್ಲಾ ಜೀರ್ಣಿಸಿ, ದಕ್ಕಿಸಿಕೊಳ್ಳಲೆಂದೇ ತೊಡಗಿದ್ದಾನೆ ನೋಡು ಮತ್ತದೇ ನಿಯಮಚಕ್ರಕ್ಕೆ ತನ್ನನ್ನ.

ನನ್ನ ಶ್ರೀಚಕ್ರದ ತೃಷೆಯಾದರೂ ಇಂಗಿತ್ತೆಂದುಕೊಂಡೆಯಾ ರಾಜನ್? ಭರತದ ಯುದ್ಧ ಪರ್ವದಲ್ಲಿ ನಾನು ಬರಿಯೆ ಸಾರಥ್ಯವನ್ನು ವಹಿಸಿದುದರ ನ್ಯಾಯವನ್ನೇಕೆ ಕೇಳಲೊಲ್ಲೆ ಶಕುನಿ? ಕಂಸ, ಕಾಳಿಂಗರನ್ನು ಕೊಂದದ್ದಕ್ಕೆ ದಕ್ಕದ ದಾಹವದು ರಾಜನ್. ಅದಕ್ಕೂ ಮುರಳಿಯ ನಾದದ ಮತ್ತು ಕಲಿಸುತ್ತಿದ್ದೆ ನೋಡು. ಯುಗಾಂತ್ಯದಲ್ಲಿ ಘಟಿಸುತ್ತಿದ್ದ ಯಜ್ಞ ನೋಡಿಯೆ ಚಕ್ರದ ತೃಷೆ ಹಿಂಗಲೆಂದು ನೋಡು ವಹಿಸಿದೆ, ಪಾರ್ಥನಂತಹ ಸಖನ ಸಾರಥ್ಯ.

ಶಕುನಿ:

ಹಾಗೋ? ಅದಕ್ಕೇಯೇನು, ಪಾರ್ಥನಿಗೆ ಗೀತೋಪದೇಶ? ಶ್ರೀಚಕ್ರಕ್ಕಿನ್ನೂ ತೀರದ ದಾಹಕ್ಕೆ ಬಲಿಗಳು ಭರತವರ್ಷದ ಪ್ರಜೆಗಳೋ?

ಕೃಷ್ಣ:

ಗೀತೋಪದೇಶ ಮಾಡಿ ಸಂತನಂತಿದ್ದವನನ್ನು ಯುದ್ಧಕ್ಕೆಳೆದೆನೆನ್ನುವೆಯಾ...? ಕೇಳು; ಐದಂಗುಲ ಜಾಗವನ್ನೂ ಕೊಡೆನೆಂಬ ಕೌರವನ ಸಡ್ಡಿನ ಹಿಂದಿನ ದಾಹ, ಪಾಂಡವರು ತೀರಿಸದಿದ್ದರೆ ಅದಿನ್ನೆಷ್ಟು ಪಟ್ಟು ಬೆಳೆಯುತ್ತಿತ್ತೆಂಬ ಕಲ್ಪನೆಯಿದೆಯೊ ನಿನಗೆ ರಾಜ? ಹದಿಮೂರು ವರ್ಷಗಳಲ್ಲಿ ಹಸ್ತಿನಾವತಿಯ ಗಡಿಯುದ್ದಕ್ಕೂ ಹಬ್ಬಿದ್ದು ಇನ್ನೂ ಕಾಲದಲ್ಲಿ ಬೆಳೆದಿದ್ದರೆ, ಸಾಗರಗಳನ್ನೇ ಇಂಗಿಸಿದ್ದೀತು. ಅಂತಹದೊಂದು ಕ್ಷತ್ರಿಯ ದಾಹ ಕಾಲದಲ್ಲಿ ಪಳಗಿ ಮುರಳಿಯ ನಾದಕ್ಕೆ ಸೋಲುವಂತಾದಾಗ, ರಾಧೆಯ ನಾಟ್ಯದಲ್ಲಿ ಮಿಳಿತಗೊಳ್ಳುವಂತಾದಾಗ, ಬೇಕೆಂದರೆ ನುಡಿಸಿಯೇನು ನಾನೆ, ನಿನ್ನ ದಾಳಗಳ ನಾಟ್ಯಕ್ಕೆ ರಾಗ. ನಡೆಸಿಯೇನು ನಿನ್ನೊಡನೆ ನಿನ್ನ ದಾಳಗಳೊಡನೆ ಸಂವಾದ. ಅಲ್ಲಿಯವರೆಗು ತಡೆದುಕೋ ರಾಜನ್, ಆದರೆ ತಡೆಯಬೇಡ ಪಶುವೃತ್ತ ತೃಷೆಯನ್ನ. ತಡೆದು ಬೆಳೆಸಬೇಡ ಕಾಲನಲ್ಲಿ ದಾಹವನ್ನ; ಕ್ಷಣಕ್ಷಣಕ್ಕೂ ದ್ವಿಗುಣಿಸುವ ಮನುಷ್ಯನ ರೂಕ್ಷ ತೃಷೆಯನ್ನ.

ಮುಂದಂತಹ ಕಾಲದಲ್ಲೊಮ್ಮೆ ಮುರಳಿಯ ಗಾನಕ್ಕೆ ಕುಣಿಯೋಣವಂತೆ ಬರುವೆಯಾ? ತನ್ಮಯತೆಯಿಂದ ಅರ್ಪಿಸಿಕೊಳ್ಳುವೆಯಾ ನಿನ್ನದೇ ಹೃದಯದ ಮೂಕ ಭಾಷೆಗೆ, ಮೌನದ ಸ್ಪಂದನಗಳಿಗೆ. ಹೇ.. ಹೇಳು ರಾಜನ್..!

## ಅಂಕ ೨

(ಇಲ್ಲಿ ಬೇಕಾದರೆ ಒಂದು ವಿರಾಮವನ್ನೆ ಕೊಟ್ಟು ಬಿಡಬಹುದು)

ಶಕುನಿ:

ಹೆತ್ತ ಕರುಳಿನ ಬವಣೆ ತಿಳಿಯದಾಯಿತಲ್ಲೋ ನಿನ್ನ ಮುರಳಿಯ ಮನಸಿಗೆ. ಪ್ರೇಮ ಲೋಲುಪನಾದವಷ್ಟೇ ತಿಳಿದ ನಿನ್ನ ಕೊಳಲ ದನಿಗೆ ದಕ್ಕದೆ ಹೋಯಿತೊ ಹರಿ, ಕರುಳಿನ ಪಾಶ. ಐವರ ರಾಣಿಯಾಗಿಯೂ ಅನಾಥಳಾದ ದ್ರುಪದ ಪುತ್ರಿಯಿಂದ ಕರುಳಿನ ಭಿಕ್ಷೆಯನ್ನೂ ಸಹ ಪಡೆದೆಯಲ್ಲೋ ಮುರಳಿ ಲೋಲ. ಕುರುಕ್ಷೇತ್ರದ ಕಲ್ಲು ಕಲ್ಲೂ ಸಹ ಕದಡಿ ಅತ್ತರೂ ಕದಲದ ಐದು ನಾಮರ್ದ ಪಿತೃಗಳನ್ನು ಭರತ ಖಂಡಕ್ಕೆ ಪರಿಚಯಿಸಿದೆಯಲ್ಲಾ ಪಾರ್ಥ ಸಖ; ಆ ಘಳಿಗೆಯಲ್ಲೇ ಕದಡಿದೆ ನೀನು ಕಲಿಯುಗದ ರಕ್ತಸಿಕ್ತ ಗಾಥೆಯನ್ನು. ಒಂದು ಜೀವದ ಕಾಲದಲ್ಲಿ ಐದು ಜೀವಗಳ ಕಾರ್ಯವೆಸಗಿಸಿ ಕೊಂಡೆಯಲ್ಲೊ, ನಿನ್ನನ್ನು ಅಣ್ಣನೆಂದೇ ಬಗೆದ ಪಾಂಚಾಲೆಯಲ್ಲಿ.

ಆರ್ಯ ಕುಲಕ್ಕೆ ಹೊರಗಿನವಳಾಗಿಯೂ ಸಹ ಹಿಡಿಂಬೆಯಲ್ಲಿ ಹುಟ್ಟಿದ ಮಗನ ಸಾವಿಗೆ ಭೀಮ ಖತಿಗೊಂಡ ನೆನಪಿದೆಯಾ? ಸುತ್ತಣ ಹತ್ತು ಕಾಡಿನ ಹಕ್ಕಿಗಳು ಬೆಚ್ಚಿ ಮೂರ್ಛೆ ಹೋದುವಂತೆ ಭೀಮನ ಛೀತ್ಕಾರ ಕೇಳಿ: ಘಟೋತ್ಕಜನ ಸಾವಿನ ಶಾಪ ರೂಪವಾಗಿ ಹೊರಬಂದ ಭೀಮನ ಆಕ್ರಂದನದಿಂದಲೇ ತಣಿದು ಹೋದಳಂತೆ ತಾಯಿ ಹಿಡಿಂಬೆ; ನಲವತ್ತು ವಸಂತಗಳಿನ ವಿರಹ ನೀಗಿತ್ತವಳಿಗೆ, ಪಿತನ ದುಃಖದ ಪರಿ ನೋಡಿ.

ಅಲ್ಲವೋ ಮಾಧವಾ ನಿನ್ನ ಅಣ್ಣನೆಂದು ಬಗೆದವಳ ಕರುಳಲ್ಲಿ ಹುಟ್ಟಿದ ಒಂದಾದರೂ ಕುಡಿಯನ್ನು ಉಳಿಸಿಕೊಟ್ಟೆಯಾ? ಬದಲು ಅಶ್ವತ್ಥಾಮನ ಕೋಪದ ಕುಲುಮೆಗೆ ಬಲಿಯಾಗಿ ಕೊಟ್ಟು ಕುರುಕ್ಷೇತ್ರದ ಭವಿಷ್ಯವನ್ನೇ ಕಪ್ಪು ಮಾಡಿದೆಯಲ್ಲವೋ.

(ಬೆಳಕು ಕ್ಷೀಣಿಸುತ್ತಾಹೋದಂತೆ, ರಂಗದ ಹಿಂಭಾಗದಲ್ಲಿ ಕುರುಕ್ಷೇತ್ರದ ದೃಶ್ಯ)

ದ್ರೌಪದಿ:

(ಧರ್ಮರಾಯನೊಡನೆ): ಸಭೆಯ ಮುಂದೆ ಲೋಕಸಾಕ್ಷಿಯಾಗಿ ನನ್ನ ಮಾನ ತೆಗೆಯ ಹೊರಟ ಘಳಿಗೆಯನ್ನೂ ಮರೆತು ನಿನ್ನ ಕುಡಿಗೆ ನನ್ನ ಕರುಳು ಬೆರೆಸಿದ್ದೆನಲ್ಲಾ ರಾಜನ್, ನಿನ್ನ ಕರುಳು ಹರಿಯಲಿಲ್ಲವೇ ಪುತ್ರ ಶೋಕದಿಂದ
(ಅರ್ಜುನನ್ನುದ್ದೇಶಿಸಿ)

ಪಾರ್ಥ, ಅಭಿಮನ್ಯುವಿನ ಶೌರ್ಯ ಮತ್ತು ತ್ಯಾಗ ನಿನ್ನ ಪ್ರಾಣವುಳಿಸಲಿಲ್ಲವೋ ಈಗ, ನಾನು ನೀನು ಪ್ರೀತಿಯಿಂದ ಹೊಸೆದ ಜೀವ ನಿನ್ನ ಪ್ರಾಣ ಉಳಿಸಿದ್ದರ ಕೃತಜ್ಞತೆ ಸಹ ನಿನ್ನ ಕಣ್ಣಲ್ಲಿ ನೀರು ತರಿಸಲಿಲ್ಲವಲ್ಲ? ಐದಕ್ಕೊಮ್ಮೆ ಬರುವ ನಿನ್ನ ಮಿಲನದ ವಸಂತ ಘಳಿಗೆಗಳಿಗೆ ಕಾತರಿಸಿ ತುಡಿದದ್ದಕ್ಕೆ ಅರ್ಥವಿಲ್ಲವೆಂದು ಬಿಟ್ಟೆಯಲ್ಲ ಕ್ರೂರಿ!

(ಭೀಮನ ಬಳಿ ಸಾರಿ)
ದುಶ್ಯಾಸನನ ಕರುಳು ಬಗೆದುದು ನಿನ್ನ ರೋಷಕ್ಕಷ್ಟೇ ಎಂದು ಸಾರಿಬಿಟ್ಟೆಯಲ್ಲ ವಾಯು ಪುತ್ರ; ದುರ್ಯೋಧನನ ತೊಡೆಮುರಿದ ಸುಖದಲ್ಲಿ, ನಮ್ಮ ಪ್ರೇಮದ ಬಲಿಯಾಗಿದ್ದು ತಟ್ಟುವುದಿಲ್ಲವೋ ನಿನಗೆ?.

(ನಕುಲ ಸಹದೇವರ ಬಳಿ ಹೋಗಿ)
ನನ್ನ ಅತಿ ಪ್ರಿಯ ಸಖರೆಂದುಕೊಂಡೆನಲ್ಲಾ ನಿಮ್ಮನ್ನು; ನೀವೇಕೆ ಚೀರಲಿಲ್ಲ, ನಮ್ಮ ಮಕ್ಕಳ ಮೃತ್ಯುವಿಗಾಗಿ?

(ಸರಿದು ಕೃಷ್ಣನ ಬಳಿ ಮಂಡಿಯೂರಿ; ಇಲ್ಲಿಯವರೆಗೂ ಮಸುಕು ಬೆಳಕಿನಲ್ಲಿ ಕೃಷ್ಣ ನಿಶ್ಚಲನಾಗಿರುತ್ತಾನೆ)
ಒಂದು ಜೀವದ ಅಳಲು ತಾಳಲಾರದ ಬದುಕಿಗೆ, ಐದು ಸಾವುಗಳ ಶಾಪ. ಅದಕ್ಕಿಂತಲೂ ಹೆಚ್ಚಿನ ಕ್ರೌರ್ಯ, ಐದು ಪಿತೃಗಳ ಶುಷ್ಕ ಮೌನ. ಭರತ ಖಂಡದಲ್ಲಿಯೇ ಮುಂದಾರಿಗೂ ಒದಗದಿರಲಿ ಪಾಂಚಾಲಿಯ ಈ ಪಾಡು ದೇವನ್, ಯಾರಿಗೂ ಒದಗದಿರಲಿ.

ಕೃಷ್ಣ: (ರಂಗದ ಮಧ್ಯಕ್ಕೆ ಬರುತ್ತಿದ್ದಂತೆ ಬೆಳಕು ಅವನ ಮೇಲೆ ಬೀಳುತ್ತದೆ) ಹದಿನಾರರ ಬಾಲೆಯೇ ಆದರೂ ಹೆಣ್ಣು, ತನ್ನ ಕರುಳು, ಕಂದನಿಂದ ಭಾರವಾದ ದಿನದಿಂದಲೇ ಅದೆಷ್ಟು ಬೆಳೆದುಬಿಡುತ್ತಾಳೆ! ಬೀಜವೊಂದು ಮೊಳಕೆಯೊಡೆದು ಮರವಾಗಿ ಬೆಳೆದು ಫಲ ಕೊಡುವಷ್ಟು ಬೆಳೆದು ಬಿಡುತ್ತಾಳೆ. ಅಂತಹ ತಾಯಿ ನಿಜವಾಗಿಯೂ ನೋಯುವುದು ತನ್ನ ಕಂದನ ನೋವಿನಲ್ಲಿ ಮಾತ್ರ. ಕರುಳು ಕೊಯ್ದದ್ದಕ್ಕೆ, ಕಾಲ ತನಗಿತ್ತ ಮೋಕ್ಷವನ್ನೂ ಧಿಕ್ಕರಿಸಿ ಆರ್ತಿಸುತ್ತ ಇರಬಲ್ಲಳಾದರೆ ಈ ಲೋಕದಲ್ಲಿ ಅದು ತಾಯಿಯೊಬ್ಬಳೇ. ಭರತವರ್ಷದ ಮಹಾತಾಯಿಯಾಗಿದ್ದಕ್ಕೆ, ದ್ರೌಪದಿಯ ಶೋಕ ಕಾಂಡವಿನ್ನೂ ಮುಗಿದಿಲ್ಲ. ಆದರೆ ಇಲ್ಲಿಯೂ ಅವಳ ತಾಯ್ತನದ ಅಗತ್ಯವಿದೆಯಲ್ಲ..!
(ಎಂದು ಕೃಷ್ಣ ದ್ರೌಪದಿಯತ್ತ ಸರಿಯುತ್ತಾನೆ)

ದ್ರೌಪದಿ:

ಹೃದಯದಲ್ಲಿ ಪ್ರೇಮವಿಟ್ಟು, ಕರುಳೊಳಗಿನ ಉರುಳಾಗಿ ಈ ಜಗತ್ತಿಗೆ ಹೊರಳಿದ ದಿನದಿಂದಲೂ ಕನಸಿದ ಬದುಕಿನಲ್ಲಿ ತಾಯ್ತನದ ಹಂಬಲವೇಕೆ. ದೇವನ್?.. ಹೆಣ್ಣಿಗೆ. ಪ್ರಿಯಕರನ ಪ್ರೇಮದ ಕನಸಿನ ಬಲೆಯಲ್ಲೂ ಹೆಣ್ಣು ಹೆಣೆಯುವ ಕುಸುರಿನ ರೂಪವೆಲ್ಲ ಕಂದನದ್ದಲ್ಲವೆ ಕೃಷ್ಣ? ಪಿತನಿಗೂ ಮಾತೆಯಾಗುವ ಹಂಬಲವಿಟ್ಟುಕೊಂಡು, ಗೊಂಬೆಗಳ ಎಡೆಯಲ್ಲಿ ಹಸಿಯಾದ ಆಸೆಗಳನ್ನು ಕನಸುವ ಕುಸುಮ ಕೋಮಲ ಮನಸ್ಸು ಬೆಳೆದರೂ ಮಾಸದ ತಾಯ್ತನದ ಹಂಬಲ ದೇವನ್! ನಿನಗೆ ತಿಳಿಯದ್ದಲ್ಲೆ! ಪಾರ್ಥನ ಬಾಣ ಭೇಧಿಸಿದ್ದು, ಮತ್ಸ್ಯಯಂತ್ರವಾದರೂ, ಅದಕ್ಕೆ ಸೋತು ತೆರೆದದ್ದು ನನ್ನ ಮನಸ್ಸಿನ ಒಳ ಬಾಗಿಲು. ಆ ಘಳಿಗೆಯಲ್ಲಿ ಅರ್ಜುನ ಸೂರೆಗೊಂಡಿದ್ದು ನನ್ನ ಕನಸಿನರಮನೆಯೆಂದು ನಿನ್ನ ಸಖನಿಗೆಂದಾದರೂ ತಿಳಿ ಹೇಳಿದ್ದೆಯಾ...? ಅರಣ್ಯದಲ್ಲಿ ಕಾರ್ಪಣ್ಯಗಳ ನಡುವೆಯೂ ಪ್ರಿಯನಿಗೆ ಒಲಿದ ತಾಯ್ತನದ ಬಯಕೆಯನ್ನು ನಿನ್ನ ಸ್ನೇಹಿತನಿಗೆ ಹೇಳದೇ ಹೋದೆಯಾ? ಯುದ್ಧ ರಂಗದ ನಡುವೆ ರಕ್ತ ಪಾಶಕ್ಕೆ ಮರುಗಿ, ತಿರುಗಿ ನಿಂತ ಪಾರ್ಥನಿಗೆ ಗೀತೆಯ ಉಪದೇಶ ಮಾಡಿದ್ದರ ಅರ್ಥ:... ನನ್ನ ಕರುಳಿನ ಪಾಶಕ್ಕೂ ಬೆಲೆಯಿಲ್ಲವೆಂದೇ?... ಹೇಳು ಕೃಷ್ಣ.

ಕೃಷ್ಣ:

ಕೃಷ್ಣೆ, ಐವರು ಪತಿಗಳ ಸಾಂತ್ವನ ಗೈದ ನೀನು ಪತಿವ್ರತೆಗಳಲ್ಲೇ ಶ್ರೇಷ್ಠಳು. ಕಾಲನ ಕಣ್ಣಿನಲ್ಲಿ ಕಣ್ಣಿಟ್ಟು ನೋಡಲಾಗದ ಪುರುಷರ ಪುಕ್ಕಲುತನಕ್ಕೆ ಬಲಿಯಾಯ್ತು ನಿನ್ನ ಮಾತೃ ಪ್ರೇಮ. ಕುರು ಕುಲದ ಕ್ರೌರ್ಯ, ಅರಸೊತ್ತಿಗೆಯ ದಾಹಕ್ಕೆ ಜನರ ಬಲಿಯಾಗದಿರ ಬೇಕಾದರೆ ನಿನ್ನ ತ್ಯಾಗದ ಅಗತ್ಯವಿತ್ತು ಸಖಿ. ನಿನ್ನಯ ಪಾಂಡವರ ಸಾವಿನ ದ್ವೇಷ.. ಕುರುಕುಲದ ಕ್ರೌರ್ಯದ ದಾಹಕ್ಕೆ.. ನಿನ್ನ ಕುಡಿಗಳನ್ನು ಒಡ್ಡುವುದು ಸಲ್ಲದಾಗಿತ್ತು ಸಖಿ.

ದ್ರೌಪದಿ:

(ನಿಟ್ಟುಸಿರು ಬಿಡುವಂತೆ) ಹುಂ! ತ್ಯಾಗ!
ಪ್ರೇಮ ಸುಖದ ಎಗ್ಗಿನಲ್ಲಿ, ಸಾವಿನ ಹೆದರಿಕೆಯನ್ನು ಮೆಟ್ಟಿ, ಹುಟ್ಟಿಗಾಗಿ ಕನವರಿಸುವ ತಾಯ್ತನದ ಬಯಕೆಯೇ ನನಗಿಂದು ಶಿಕ್ಷೆಯಾಗಿದೆ ಕೃಷ್ಣ; ಕನ್ನಡಿಯ ಗಂಟಾಗಿದ್ದ ಪಾಂಡವರ ಬದುಕಿನ ಚಕ್ರಕ್ಕೆ ಕಣ್ಣಾಗಿ ನನಗಿದ್ದ ಒಂದೇ ಆಸೆ, ತಾಯ್ತನದ್ದಾಗಿತ್ತು. ಇಲ್ಲದಿದ್ದರೆ, ಉಪೇಕ್ಷೆಗೇನೂ ದೂರವಿಲ್ಲದ ಧರ್ಮಜನ ಪ್ರೀತಿಯ ಪರಿಗೂ ಪತ್ನಿಯಾಗಿದ್ದೆನಲ್ಲ! ತಾಯ್ತನದ ಮೋಹವಲ್ಲದಿನ್ನೇನು?

ತ್ಯಾಗವೆಂದೆಯಲ್ಲ ನೀನು? ಅದರ ಮೋಹ ಬಲೆಗೆ ಇಡಿಯಾಗಿ ಬಿದ್ದವರಲ್ಲವೇ ಈ ಸ್ತ್ರೀ ಸಂಕುಲ..?

ಕೃಷ್ಣ:

ಸತ್ತರೂ ಸರಿ, ಸೃಷ್ಟಿಸಿಯೇ ತೀರುವೆನೆಂಬ ತಾಯ ಹಂಬಲ, ಛಲ, ಪುರುಷರಿಗೆ ಸುಲಭವಾಗಿ ದಕ್ಕುವ ಭಾವವಲ್ಲ ಸಖಿ.
ಸೃಷ್ಟಿಯ ನೋವಿನ ಸುಖ ಅರಿಯದ ಪೌರುಷಕ್ಕೆ ಹೋರಾಟವೊಂದೇ ಗೊತ್ತಿರುವ ಮಂತ್ರ.
ಸೃಷ್ಟಿಯ ಸಂಪೂರ್ಣ ಜ್ಞಾನವಿಲ್ಲದ ಬರಡು ಪೌರುಷಕ್ಕೆ, ಉಳಿವಿಗಾಗಿ ತಾನು ತೋಲ ತಪ್ಪಿಸಿ ನಡೆಸುವ ಯಮ ಯಜ್ಞದ ಅರಿವೇ ಇರುವುದಿಲ್ಲ. ಪಿತೃಗಳ ಸಾವಿನ ರೊಚ್ಚಿನಿಂದ ಯಾವ ಪಾಂಡು ಪುತ್ರರೂ ಶಾಂತಿಯಿಂದ ರಾಜ್ಯವಾಳುವುದಕ್ಕಿರಲಿಲ್ಲ. ದ್ರೋಣ ಪುತ್ರ ಅಶ್ವತ್ಥಾಮನನ್ನೇ ನೋಡಿದೆಯಲ್ಲ! ಪಿತೃ ಶೋಕ ಶಮನಕ್ಕಾಗಿ ಎಳಸಿದ ನಿರ್ಮಾನುಷ ಕುತಂತ್ರದ ಮಾರ್ಗ.
ಪಿತೃಗಳ ಉದ್ದೇಶ ಸಾಧನೆಗಾಗಿ ಮಡಿದ ಅಭಿಮನ್ಯುವಿನ ಕೈಯಲ್ಲಿ ಅದಿನ್ನೆಷ್ಟು ಜನ ವಿಧವೆಯರಾಗುತ್ತಿದ್ದರೋ?

ದ್ರೌಪದಿ:

ಉಪಪಾಂಡವರಿಗಿದಿರಾಗಿ ಅಭಿಮನ್ಯುವಿನ ಮಾತು; ನಿನ್ನ ರಕ್ತದ ಪಾಲೊಂದಿಗೆ ಹುಟ್ಟಿದವನೆಂದೇ ಕೃಷ್ಣ?
ಧರ್ಮ ಸೂಕ್ಷ್ಮದಲ್ಲಿ ದಿವ್ಯ ನಿರ್ಲಕ್ಷ್ಯ ಮೂರ್ತಿಯಂತಿದ್ದ ಅಗ್ರಜನ ಕುಡಿಗೂ ತಾಯಿಯಾದ ಮೋಹ. ನನ್ನ ಕರುಳಿಗೆ ಬೆಸೆದು ಬಂದ ಆ ಕಂದ ಧರ್ಮಜನ ಕಣ್ಣನ್ನೂ ತೆರೆಸುವಂತಹ ಮನಸ್ಸಿನವನಲ್ಲವೆ?
ಧಾರೆ ಧಾರೆಯಾಗಿ ಸುರಿಯುವ ಪ್ರೀತಿಯ ಸೋನೆಯನ್ನೂ ಮರೆತು ಭೀಮನಿಂದ ದೂರವಾಗುತ್ತಿದ್ದೆನಲ್ಲ, ಅದೆಂಥ ಹುಚ್ಚಿನ ನಿಷ್ಠೆ ಅರ್ಜುನನ ಮೇಲೆ; ಉಲೂಪಿ ಸುಭದ್ರೆಯರಾದಿಯಾಗಿ ಅನ್ಯರ ಸಹವಾಸವೆಸಗಿ ಬಂದರೂ ಅದೆಂತಹ ಪ್ರೀತಿಯ ಮೋಹ ಪಾರ್ಥನ ಮೇಲೆ!
ಈ ಇಬ್ಬರು ವೀರರಿಗೆ ಜನಿಸಿದ ಕುಡಿಗಳನ್ನು ತಾಯ್ತನದ ಹಂಬಲದಿಂದ ತವರಿನ ರಕ್ಷಣೆಗೆ ಕಳಿಸಿದ್ದು ತಪ್ಪಾಗಿ ಹೋಯ್ತೆ ಕೃಷ್ಣ? ದೃಷ್ಟದ್ಯುಮ್ನ ವರ್ಣಿಸಿದಾಗೊಮ್ಮೆ ಅವರ ಶೌರ್ಯದ ರೀತಿಗೆ ಹೆಮ್ಮೆ ಪಟ್ಟದ್ದು ಕೇವಲ ನನ್ನ ತಾಯ್ತನದಿಂದ ಕುರುಡಾದ ಮಮತೆಯ ಭ್ರಮೆಯೆನ್ನುವಿಯೇನು?
ಜೇನಿನಂತಹ ಸೋನೆಮಳೆಯನ್ನು ತ್ಯಜಿಸಿ ಸಂತಾಪ, ಸಹಾನುಭೂತಿಗಳ ತುಣುಕು ಸಹ ಕಾಣದಂತೆ ಎಚ್ಚರ ವಹಿಸಿ ಸಾಗುತ್ತಿದ್ದೆನಲ್ಲ ನಕುಲ

ಸಹದೇವರ ಬಳಿಗೆ..ಬಸಿರು ತುಂಬುವ ಹಂಬಲವಿತ್ತೋ ಕೃಷ್ಣ..ಮೋಹನ ರಾಗ ನುಡಿಸುವ ಮುರಳಿಯ ಲಯವರಿತ ನಿನಗೆ ತಿಳಿಯದ್ದೇ?

ಕುಂತಿ ಮಾದ್ರಿಯರೆರಡು ಕರುಳುಗಳ ಭಾಗವಾಗಿ, ದ್ರೌಪದಿಯ ಪಾತಿವ್ರತ್ಯದಡಿಯಲ್ಲಿ ಒಂದಾದ ಪಾಂಡವರಿಗಿಂತಲೂ,...ನನ್ನದೇ ಕರುಳನ್ನು ಹಂಚಿಕೊಂಡು ಅಂಗೈಯ ಐದು ಬೆರಳುಗಳಂತಿದ್ದ ಉಪಪಾಂಡವರ ಪರಿಪೂರ್ಣ ಶಕ್ತಿಯನ್ನೇಕೆ ಭರತವರ್ಷಕ್ಕೆ ತೋರಿಸದಾದೆ ಕೃಷ್ಣ?

ಹಾಲಿನಿಂದ ತುಂಬಿ ಭಾರವಾದ ಎದೆಯನ್ನು ಕಂದನೊಂದು, ಜಗ್ಗಿ ಸೆಳೆಯುವ ನೋವನ್ನೆ ಸುಖವೆಂದು ಬಗೆವ ತಾಯಿಯನ್ನರಿಯದಾದೆಯಾ?

ಕೃಷ್ಣ:

ನಿನ್ನೈದು ಕುಡಿಗಳ ಶೌರ್ಯದ ಬಗ್ಗೆ ನಿನಗೆ ಶಂಕೆಯಿದ್ದಿದ್ದರೆ ಬಿಟ್ಟು ಬಿಡು ಕೃಷ್ಣೆ. ಐದು ಜನ ಪಿತೃಗಳಲ್ಲೊಬ್ಬರೂ ಸಹ ಅವರನ್ನು ರಾಜ್ಯಕ್ಕಾಗಿ, ರಣ ಭಿಕ್ಷೆ ಯಾಚಿಸಲಿಲ್ಲ. ಯಾಚಿಸಿದ್ದರೆ, ಅದಕ್ಕಾಗಿ ಅವರು ಹೋರಾಡಲಿದ್ದ ಪರಿ ಭೀಮ, ಪಾರ್ಥರನ್ನೂ ನಾಚಿಸುವಂತಿರುತ್ತಿತ್ತೆಂಬುದು, ತಾಯಿಯೊಬ್ಬಳ ಮಮತೆಯ ಕಲ್ಪನೆಯಷ್ಟೇ ಆಗಿರಲಿಲ್ಲ. ಕೊನೆಗೂ ಪರಾಕ್ರಮದಿಂದ ರಾಜ್ಯಕ್ಕಾಗಿ ಹೋರಾಡಿ ಮಡಿದ ಉಳಿದವರೆಲ್ಲಿ? ಪಿತೃಗಳ ಪ್ರಾಣ ರಕ್ಷಣೆಗೆ ಬಲಿಯಾದ ನಿನ್ನ ಕುಡಿಗಳೆಲ್ಲಿ?

ಪ್ರಿಯ ಅನುಜೆ, ಕೃಷ್ಣೆ, ಸಖೀ.., ಭರತ ಕಥನದುದ್ದಕ್ಕೂ ಪಾಂಡವರ ಅಸ್ತ್ರಗಳ ಮಂತ್ರವಾಗಿದ್ದೆಯಲ್ಲವೇ ನೀನು. ಹಾಗಿರದ ವಿನಾ ಕುರು ವಂಶದ ಕ್ರೌರ್ಯಕ್ಕೆ ಸವಾಲಾಗುವುದು ಸಾಧ್ಯವಿತ್ತೇ? ಇಲ್ಲ ಸಖಿ.. ಕ್ಷತ್ರಿಯ ಧರ್ಮಕ್ಕೆ ಅಂಟಿಕೊಂಡ ವಾಸನೆಗಳಿಂದ ವಿಮೋಚನೆ ಸುಲಭವಲ್ಲ. ಜನಹಿತಕ್ಕಾಗಿ ಆಳುವ ಸ್ಥೈರ್ಯ ತೋರಿಸಬೇಕಾದ ಧರ್ಮಜನ ಧರ್ಮ, ಅಡ್ಡಗಾಲು ತೊಡರುಗಾಲಿಡುತ್ತ ಸಾಗಿ ಕುರುವಂಶ ಪಾಂಡು ವಂಶಗಳ ಕುಲಧರ್ಮವಷ್ಟೆ ಆಗಿತ್ತಲ್ಲ.. ಅದರಲ್ಲಿನ ನ್ಯಾಯವೇನು ಹೇಳು?

ಐದು ಗ್ರಾಮವನ್ನೂ ಕೊಡದೆ, ತನ್ನ ಕ್ಷತ್ರಿಯ ವಾಸನೆಯ ತೃಪ್ತಿಗೆಳಸಿದ ರಾಜರುಗಳಿಂದ ಪ್ರಜೆಗಳಿಗೇನು ಸುಖವಿರಬಹುದು? ಕುರುಕ್ಷೇತ್ರದಲ್ಲಿ ನಡೆದ ಭರತ ಖಂಡದ ಕದನಲ್ಲಿ ಸಾವಿಗೆ ಅಣಿಯಾಗಿ ಬಂದವರೇ ಅಕ್ಷೋಹಿಣಿ ಸಂಖ್ಯೆಯ ಕ್ಷಾತ್ರ ವಾಸನೆಯ ಬಲಿಗಳು. ಅವರ ಮುಕ್ತಿಗಿನ್ನೇತರ ದಾರಿ ಸಖಿ?

ಮರ್ತ್ಯದ ಈ ರೊಚ್ಚಿನ ಕಿಚ್ಚಿನಲ್ಲಿ ಬೇಯುವುದು ಸಲ್ಲದೆಂದೆ ತಂಗಿ ಉಪ ಪಾಂಡವರ ತ್ಯಾಗ. ಮರೆತು ಬಿಟ್ಟೆಯಾ..? ವನವಾಸದ ಘೋರ

ನರಕದ ಪಾಠ? ಅಜ್ಞಾತ ವಾಸದಲ್ಲಿನ ಲೋಕೋತ್ತರ ವೀರನ ಷಂಡತನ. ಇವೆಲ್ಲವುಗಳಿಂದ ಮುಕ್ತಿ, ಕಾಲನ ಕೈಯಲ್ಲಷ್ಟೇ ಸಾಧ್ಯವಿತ್ತು ಸಖಿ. ಕುರುಕ್ಷೇತ್ರ ರಣರಂಗವಾಗಿಲ್ಲದಿದ್ದರೆ, ಭರತ ಖಂಡದಲ್ಲಿ ಪ್ರಳಯವಾಗುವುದಿತ್ತು.

ಕೃಷ್ಣೆಯ ಶ್ರೀ ಮುಡಿಗೆ ಕುತ್ತಾದಾಗಷ್ಟೇ, ತಾಯಿ ಭಾರತಿಯ ಮುಡಿಗೆ ಬಂದ ಸ್ಥಿತಿ ಪಾಂಡವರಿಗೆ ಅರಿವಾದದ್ದು.

ದ್ರೌಪದಿ:

ಅನಂತ ವಿರಹದ ನೋವಿನಲ್ಲಿ ಪ್ರೀತಿಯ ನೆನಪಿನ ಒಂದು ಎಳೆಯಾದರೂ ಇದೆ ಕೃಷ್ಣ; ಅಂತೆಯೇ ಮೀರೆಗೆ ಅನನ್ಯ ಭಕ್ತಿ ಪ್ರೇಮದ ಪುತ್ಥಳಿಯೊಂದಿಗೆ ಸಾಧ್ಯವಾಯ್ತು. ಆದರೆ ತಾಯ ಕರುಳು ಹರಿದರೆ ಸಿಗುವುದು ವಿರಹದ ನೋವಲ್ಲ ನೋಡು. ಕರುಳಿನ ಕುಡಿ ಇಲ್ಲದೆಡೆ ನೆನಪುಗಳಷ್ಟೆ ಸಾಲುವುದಿಲ್ಲ; ಕರುಳು ಚೆಲ್ಲಿ ಕನಸಿದ ಬದುಕು ಶೂನ್ಯವಾದಲ್ಲಿ, ಆಳವಿಲ್ಲದ ದುಃಖದ ಮಡುವಿನ ಸೃಷ್ಟಿ. ಈಸುವ ಇಚ್ಛೆಯೂ ಬಾರದ ಚಿರಸ್ಥಾಯಿ ಶೋಕದ ಮಟ್ಟಿ. ಏಕೆ ಹೀಗೆ ಹೇಳು?

ಕೃಷ್ಣ:

ರಾಜಶ್ರೀ ಎಂದರೆ, ರಾಜ್ಯದ ಹೊಣೆಯೆಲ್ಲ ನಿನ್ನದೇ ಅಲ್ಲವೆ ಸಖಿ? ಹಸ್ತಿನೆಯ ಎಡೆಯೆಡೆಯಲ್ಲಿ ತಡವಿಯೂ ಸಿಗದ ಮಮತೆ, ರಾಜಶ್ರೀಗೆಂತು ದಕ್ಕೀತು? ಹಸ್ತಿನಾವತಿಯ ಬೀದಿಗಳಲ್ಲಿ ದುಶ್ಯಾಸನ ಜನ ಸಾಮಾನ್ಯರ ಮೇಲೆಸಗಿದ ಅಪಚಾರ, ಆರ್ಯ ಕುಲ ಧರ್ಮ ಪೋಷಕನಾದ ಧರ್ಮಜನ ಕಣ್ಣು ತೆರೆಸಲಿಲ್ಲ.. ಇಂದ್ರಪ್ರಸ್ಥದ ವೈಭೋಗದಲ್ಲಿ ಮೈಮರೆತ ಪಾಂಡುತನಯರಾರನ್ನೂ ಹಸ್ತಿನೆಯ ಜನಶ್ರೀಯ ಮೇಲೆ ನಡೆದ ಅಧರ್ಮ ಎಚ್ಚರಿಸಲಿಲ್ಲ.. ಆರ್ಯ ಧರ್ಮದ ಭ್ರಮೆಯಲ್ಲಿ ಅವರು ಮರೆತ ರಾಜಧರ್ಮ, ಕ್ಷಾತ್ರ ಧರ್ಮದ ಕರ್ತವ್ಯದ ಕಡೆ ಕಣ್ಣು ತೆರೆಸಲು ನಿನ್ನ ಶ್ರೀ ಮುಡಿಯ ಅಗತ್ಯ ಬಿತ್ತು ಸಖಿ..

ಹಸ್ತಿನಾವತಿಯ ಮರೆಮರೆಯಲ್ಲಿ ನಡೆದ ಅತ್ಯಾಚಾರಗಳಿಗೆ ಅತ್ತ ಎಷ್ಟು ಜೋಡಿ ಕಣ್ಣುಗಳನ್ನು ನಾನು ಬಲ್ಲೆನೆಂಬ ಅರಿವುಂಟೇ ಸಖಿ ನಿನಗೆ? ತುಂಬು ಸಭೆಯಲ್ಲಿ ನಿನ್ನನ್ನು ದರ ದರ ಎಳೆದೊಯ್ದ ಆ ಕ್ಷುದ್ರ ಘಳಿಗೆಯಲ್ಲೂ, ಸ್ತ್ರೀ ರಕ್ಷಣೆಯಂತಹ ಪರಮ ಶ್ರೇಷ್ಠ ಧರ್ಮವನ್ನು ಆರ್ಯಧರ್ಮ, ಕುಲಧರ್ಮದ ಹೆಸರಿನಲ್ಲಿ ಮರೆತ ರಾಜಪುತ್ರರ

ಷಂಡತನ ನೋಡಲಾರದ್ದಕ್ಕಲ್ಲವೆ, ನಿನ್ನ ರಕ್ಷಣೆಗೆ ನಾನು ಎಳಸಿದ್ದು? ಇಲ್ಲದಿದ್ದರೆ.. ಲೋಕಕ್ಕೇ ರಾಣಿಯಾಗಬೇಕಾದ ಕೃಷ್ಣೆಯ ರಕ್ಷಣೆ ಅವಳ ಪ್ರಿಯರಿಂದಲೇ ಆಗಬೇಕೆಂಬ ಪ್ರಕೃತಿ ಧರ್ಮಕ್ಕೆ ಶರಣಾಗಿದ್ದರೆ ನಾನು....? ಸಖಿ, ನನ್ನ ಮುರಳಿಯ ಗಾನದ ಸವಿಗೆ ಅರ್ಥ ಬರುತ್ತಿರಲಿಲ್ಲ. ಅದಕ್ಕೆಂದೇ ಭರತ ಪರ್ವದುದ್ದಕ್ಕೂ ಕೃಷ್ಣ ಕುತಂತ್ರಿಯೆಂಬ ಬಿರುದು ಹೊತ್ತು ಕುಪ್ರಸಿದ್ಧಿಗೊಳಬೇಕಾಯಿತು.

ಆದರೇನಂತೆ, ಹಸ್ತಿನಾವತಿಯ ರಾಜ ಸಭೆಯಲ್ಲಿ ನನಗೆ ಸಿಗದ ಮರ್ಯಾದೆ, ಅದರ ಬೀದಿ ಬೀದಿಗಳಲ್ಲಿ ದೊರಕಿದುವಲ್ಲಾ...!

ದ್ವಾರಕೆಯ ಗದ್ದುಗೆ ಸಿಕ್ಕದೆಯೂ, ಯಾದವರ ಪ್ರೀತಿ ನನಗೆ ದೊರೆತ ಪರಿ ನಿನಗೆ ತಿಳಿಯದ್ದೇನಲ್ಲ ಕೃಷ್ಣೆ.

ದ್ರೌಪದಿ:

ಹೌದೌದು; ಜಗನ್ನಾಟಕ ಸೂತ್ರಧಾರನಲ್ಲವೆ..; ದ್ವಾರಕೆಗಾಗಿ ನಡೆದ ಯುದ್ಧದಲ್ಲಿ ನೊಂದವರನ್ನು ಸಂತೈಸಿದ್ದೆಯಲ್ಲ..

ಯುದ್ಧದಲ್ಲಿ ಕಳೆದುಕೊಂಡ ಪತಿ ಮತ್ತು ಪಿತರ ಶೂನ್ಯವನ್ನು ತುಂಬಿದ್ದೆಯಲ್ಲ ನೀನು?..ಅನುಜೆಯಂತಿದ್ದ ನನ್ನ ಬದುಕು ವನವಾಸದ ಕುಲುಮೆಯಲ್ಲಿ ಬೇಯುತ್ತಿದ್ದರೆ, ಅನುಜೆಯಷ್ಟೆ .. ಎಂಬ ಕಾರಣಕ್ಕೆ, ನನ್ನ ಕುಡಿಗಳಿಗೆ ಆಶ್ರಯವಾಗುವ ಮನಸ್ಸು ಬಾರದೇ ಹೋಯಿತೇ ಕೃಷ್ಣ? ಹೇಳು..ಹೇಳು...

ಈ ಕೃಷ್ಣೆಯ ವಿರಹಕ್ಕೆ ದಕ್ಕುವ ಶಕ್ತಿ ನಿನಗಿಲ್ಲದಿದ್ದರೂ, ನನ್ನ ಕುಡಿಗಳನ್ನು ಪೋಷಿಸುವ ಪರಿ ಕಲ್ಪನೆಗೂ ದಕ್ಕದೇ ಹೋಯಿತೆ ನಿನಗೆ..

ಅಣ್ಣ ದೃಷ್ಟದ್ಯುಮ್ನನಿಗಿಂತ ಚೆನ್ನಿನ ರೀತಿಯಲ್ಲಿ ಅವರನ್ನು ಪಾಲಿಸುವ ಕೆಚ್ಚು ಇಲ್ಲದಾಗಿ ಹೋಯಿತೆ ನಿನಗೆ?..

ಕೃಷ್ಣ:

ಅಪಹಾಸ್ಯಗೈಯುತ್ತಿದ್ದೀಯೇನು ಕೃಷ್ಣೆ?.. ಇಂದ್ರ, ವಾಯು ಯಮಾದಿಗಳ ಅಂಶ ಸಂಭೂತರಾದ ಉಪಪಾಂಡವರೆಲ್ಲಿ?..ಕಾಲದ ಮತ್ತಿನಲ್ಲಿ ಸಣ್ಣ ಪುಟ್ಟ ಕನಸುಗಳಿಗೆ ಕಾರಣರಾದ ಸೈನಿಕರ ಕುಡಿಗಳೆಲ್ಲಿ?

ವಸಂತದಲ್ಲೋ, ಶಿಶಿರದಲ್ಲೋ, ಒಮ್ಮೆ ಗೋವಳದಲ್ಲಿ ಕೂಡಿ ಚೆಂಡಾಟ ಆಡಿದರೆ ಉಪಪಾಂಡವರಿಗೆ ಪಿತೃಸಮಾನ ವಾದಂತೆಯೇನು? ಅಲ್ಲದೆ ದೃಷ್ಟದ್ಯುಮ್ನನ ರಾಜ್ಯದಲ್ಲಿನ ಸವಲತ್ತುಗಳು ದ್ವಾರಕೆಗಿಂತಲೂ ಮಿಗಿಲೆಂಬುದನ್ನು ತವರಿನ ಹೆಮ್ಮೆಯಿಂದಲಾದರೂ ನೀನು ಹೇಳುವವಳಿದ್ದೆಯಲ್ಲ?

ನಿಜ, ಅಭಿಮನ್ಯುವಿಗೆ ಕೊನೆಯ ಪಕ್ಷ ತಾಯಿಯ ಸಾಮಿಪ್ಯ, ಸನ್ನಿಧಿಯಾದರೂ ಸಿಕ್ಕಿತ್ತು. ಉಪಪಾಂಡವರಿಗದು ಸಾಧ್ಯವಿದ್ದಿರಲಿಲ್ಲ ದ್ರೌಪದಿ. ರಾಜಶ್ರೀಯಾಗಿ, ನಂತರ ರಾಜಮಾತೆಯಾಗಬೇಕಾದ ಹೆಣ್ಣೊಬ್ಬಳ ಅನಿವಾರ್ಯತೆ ನಿನ್ನದಾಗಿತ್ತಲ್ಲವೆ?

ಇಂದ್ರಪ್ರಸ್ತದ. ಸೌಖ್ಯದಲ್ಲಿ ಒಂದಾಗಿದ್ದ ಪಾಂಡವರು ನಿನ್ನ ಪ್ರಭೆಯಿಲ್ಲದಿದ್ದರೆ ಒಕ್ಕಟ್ಟಾಗಿ ಸಾಗುತ್ತಿದ್ದರೆಂಬ ಭರವಸೆ ನಿನಗಾದರೂ ಇತ್ತೇನು? ಅದಕ್ಕಲ್ಲವೆ ನೀನು ಐವರು ಪತಿಯರ ಒಕ್ಕೂಟದೊಡನೆ ಸಾಗಿದ್ದು.

(ದ್ರೌಪದಿಯ ಬಳಿ ಸಾರಿ ವ್ಯಂಗ್ಯ ತುಂಬಿದ ಭಾವದಲ್ಲಿ) ಉಪಪಾಂಡವರ ಮೇಲಿನ ಉಪೇಕ್ಷೆಯೆಂದರೆ ಒಪ್ಪುವಿಯೇನು..? ಇಲ್ಲ, ಪತಿಪತ್ನಿಯರ ನಡುವಣ ಉತ್ಕಟ ಪ್ರೇಮವೆನ್ನಲೋ..

ಸಖಿ, ಮಾತಾಪಿತೃಗಳ ಪಾಲನೆಯಿಂದ ವಂಚಿತರಾದವರು ಭರತವರ್ಷದಲ್ಲಿ ಉಪಪಾಂಡವರಷ್ಟೆ ಎಂದುಕೊಂಡೆಯೇನು? ರಾಜಮಾತೆಯಾಗಿ ಭರತವರ್ಷದ ಅಸಂಖ್ಯ ಪುತ್ರರನ್ನು ಸಂತೈಸಿದೆಯಲ್ಲ.. ಕುಂತಿಗದು ಸಾಧ್ಯವಾಗಿರಲಿಲ್ಲ. ತನ್ನದೇ ಕುಡಿ ಕರ್ಣನನ್ನೆ ಉಳಿದವರ ಸೌಖ್ಯಕ್ಕೆ ಬಲಿಯಾಗಿಸಿಬಿಟ್ಟಳಲ್ಲ!..

ಕೃಷ್ಣೆ, ಕಾಲ ಅವಕಾಶ ಕೊಟ್ಟಾಗೊಮ್ಮೆ, ಮೋಕ್ಷವನ್ನೂ ಧಿಕ್ಕರಿಸಿ ನಿನ್ನ ಕರುಳಿನ ಚೂರುಗಳ ನೆನಪಿನಲ್ಲಿ ಮುಳುಗಿದ್ದೀಯಲ್ಲಾ? ಕುರುಕ್ಷೇತ್ರದಲ್ಲಿ ಕಾಲ ಉಂಡು ಬಿಟ್ಟ ಹಸ್ತಿನೆಯ ಹರಿದುಳಿದ ಕರುಳಿನ ಚೂರುಗಳನ್ನೆಲ್ಲ ಬಾಚಿ ತಬ್ಬಿದ್ದೆಯಲ್ಲ, ನಿನ್ನದೇ ಕುಡಿಗಳೆಂಬಂತೆ. ಅವ್ಯಾಹತವಾಗಿ ಹರಿದು ಬಂದ ತಬ್ಬಲಿಗಳ ಸಾಂತ್ವನ ಉಪಪಾಂಡವರ ತಾಯಿಯಿಂದ ಸಾಧ್ಯವಿತ್ತೇನು?..

ತಾಯ ನೋವಿನ ಪರೆ ಸರಿಯದ್ದಕ್ಕೆ, ಅಣ್ಣನ ಭರ್ತ್ಸನೆ ಮಾಡಿದಿಯೇನು? ಮನಸ್ಸು ಸಹ ಮುಟ್ಟದ, ಕೇವಲ ಸಮಾಜದ ಕಟ್ಟಿನ ಬಂಧದೊಳಗಿರಿಸಿದ್ದ ಸಹಸ್ರ ಸಂಖ್ಯೆಯ ಪತ್ನಿಯರ ಮೇಲೆ ನಿನಗೆ ಕಿಚ್ಚೇನು?

ಹದಿನಾರು ಸಹಸ್ರ ರಮಣಿಯರಲ್ಲಿ ತೀರದ ನನ್ನ ಸಖ್ಯದ ದಾಹಕ್ಕೆ ಉದಕವಾದವಳು ನೀನು. ಯುದ್ಧದಲ್ಲಿ ಖತಿಗೊಂಡ ಪ್ರಿಯತಮರ ಜಾಗದಲ್ಲಿ, ಕೇವಲ ರಕ್ಷಣೆಯನ್ನಷ್ಟೇ ಸಾಸಿತ್ತರೂ, ನನ್ನನ್ನು ವರಿಸಿದ ಸಹಸ್ರ ಸಂಖ್ಯೆಯ ಗೋಪಿಕೆಯರ ಕಥೆ ತಿಳಿಯೆಯಾ? ನನ್ನ ಮುರಳಿಯ ನಾದಕ್ಕೇ ಸೋತು ಸುಖಿಸಿದ ನನ್ನ ಮನದನ್ನೆಯರ ವಿರಹ ತಿಳಿಯೆಯಾ?

(ಇಲ್ಲಿ ಮೀರಾ ಭಜನೆ/ರಾಸ ಲೀಲೆ/ ಕೊಳಲ ಗಾನ ಇವುಗಳಿಂದ ಪೋಷಣೆ ಪಡೆಯಲು ಸೂಕ್ತ ಸಮಯ)

ನಿನ್ನ ಶ್ರೀಮುಡಿಯ ಹೆಸರಿನಲ್ಲಿ, ನಿನ್ನ ಮಾನರಕ್ಷಣೆಯ ಅಡಿಯಲ್ಲಿ ಕುರುಕ್ಷೇತ್ರದಲ್ಲಿ ನಡೆದ ಹೋರಾಟಕ್ಕೆ ಹಸ್ತಿನಾವತಿಯಷ್ಟೇ ಅಲ್ಲ ಭರತ ಖಂಡದ ಎಲ್ಲ ಸ್ತ್ರೀಯರ ಶಾಪದ ರಕ್ಷೆ ಇತ್ತೆಂಬುದ ತಿಳಿಯೆಯಾ? ಸ್ತ್ರೀಲೋಲ ನೆಂಬ ಬಿರುದು ಕೊಟ್ಟವರ ಮಾತ್ಸರ್ಯಕ್ಕೆ ನಾನು ಹೆದರಿದ್ದರೆ, ಭರತ ಖಂಡದ ಅದೆಷ್ಟೋ ಸ್ತ್ರೀಯರ ಮಾನ ಉಳಿಯುತ್ತಿರಲಿಲ್ಲ ಸಖಿ.

ಯುದ್ಧದಲ್ಲಿ ಪ್ರಿಯನನ್ನು ಕಳೆದುಕೊಂಡು ಮಗುವನ್ನು ಕಂಕುಳಲ್ಲಿ ಹೊತ್ತು ನನ್ನ ಕಣ್ಣಿನಲ್ಲಿ ಕಣ್ಣಿಟ್ಟು ಯಾಚಿಸಿದ ಆ ತಾಯಿಯ ಪುತ್ರ ಭಿಕ್ಷೆಗೆ, ಪ್ರೇಮ ಭಿಕ್ಷೆಯ ಲೇಪವೂ ಇದ್ದಿರಬಹುದು; ಇಲ್ಲದಿದ್ದರೂ ಮಗುವನ್ನು ರಕ್ಷಿಸುವುದಕ್ಕೆ ಒಬ್ಬ ಪಿತನ ಅಗತ್ಯವಿತ್ತು ದ್ರೌಪದಿ. ಇಲ್ಲದಿದ್ದರೆ ನನ್ನವರೇ, ಯಾದವರ ಪುರುಷ ವಾಸನೆಯಲ್ಲಿ ಕಳೆದುಹೋಗುವ ಭಯ ಯುದ್ಧದಲ್ಲಿ ಪ್ರಿಯನನ್ನು ಕಳೆದುಕೊಂಡ ಎಲ್ಲ ಸ್ತ್ರೀಯರದ್ದೂ ಆಗಿತ್ತು.

ತ್ರೇತಾಯುಗದಲ್ಲಿ 'ರಾಮ' ನಾಗಿ ತೋರಿಸಿದ ಏಕ ಪತ್ನಿಯ ವ್ರತ ದ್ವಾಪರಕ್ಕೆ ಬಂದರೂ ಜನರು ಪಾಲಿಸಲಿಲ್ಲವೆಂದೇ, ಸಖಿ ನನಗೆ ಸಹಸ್ರ ಸತಿಯರ ಸಖ್ಯ.

ಪುರುಷಾಂಧತೆಯಲ್ಲಿ ಮುಳುಗಿದ ಒಂದು ಯುಗದ ಅಂತ್ಯ ಹೀಗಾದಾಗಲೇ ಪ್ರಕೃತಿ ದೇವಿಯ, ಸ್ತ್ರೀ ಶಕ್ತಿಯ ಅರಿವು ನಮಗಾದೀತು.

ದ್ರೌಪದಿ:

ತಂಗಿಯೆಂದು ಉತ್ಪ್ರೇಕ್ಷೆಯ ಸಾಂತ್ವನಗೈದೆಯೋ? ಇಲ್ಲ ನಿಜಕ್ಕೂ ನಾನು ಕುರುಕ್ಷೇತ್ರದ ಉತ್ತರವಾಗಿ ರಾಜಮಾತೆಯಾದೆನೋ ತಿಳಿಯದು ಕೃಷ್ಣ. ಆ ದಿನಗಳುದ್ದಕ್ಕೂ ನಿರಂತರವಾಗಿ ದಕ್ಕಿದ್ದು ಬರಿಯೆ ನೋವಿನ ಎಳೆಗಳು. ನಗುವ ತುಟಿಗಳ ಉದ್ದಕ್ಕೂ ನೋವಿನ ಹೊಲಿಗೆಯಿತ್ತು. ಶತ್ರು ಮಿತ್ರರೆಲ್ಲರ ಮಕ್ಕಳ ಎಳೆಯ ತುಟಿಗಳಲ್ಲಿ ಕಂಡ ಶೂನ್ಯ ಶುಷ್ಕ ಎಳೆಗಳ ಹೊಲಿಗೆ ಬಿಡಿಸುವುದರಲ್ಲಿಯೇ ಕಾಲ ಕಳೆದು ಹೋಯಿತು. ಅರ್ಥವಿಲ್ಲದೆ ನಡೆದಾಡುತ್ತಿದ್ದ ಚಿಣ್ಣರ ಕಣ್ಣುಗಳಲ್ಲಿ ಕಂಡ ಶೂನ್ಯದ ಆಳ ಬೆಚ್ಚಿಸುತ್ತಿತ್ತು.

ನಾನಿಲ್ಲದಿದ್ದಾಗ, ನನ್ನ ಉಪಪಾಂಡವರ ಕಣ್ಣುಗಳೂ ಹೀಗೆಯೇ ಇದ್ದುವೆಂಬ ಭಾವವನ್ನು ಅಳಿಸಲಾಗುತ್ತಿರಲಿಲ್ಲ; ಅವರನ್ನೇ ಸಾಂತ್ವನ

ಗೈಯುತ್ತಿದ್ದೇನೆಂಬ ಭ್ರಮೆಯಲ್ಲಿ ಕಾಲ ಸರಿದುಹೋಗುತ್ತಿತ್ತು.
ಈಗಲಾದರೂ ಹೇಳು ಕೃಷ್ಣ, ಈ ಕೃಷ್ಣೆಗೂ ಇದಿರಿಸಲಸಾಧ್ಯವೆಂದು ಉಪಪಾಂಡವರ ಬಲಿ ಕೊಟ್ಟೆಯೇನು?
'ಅಮ್ಮ ಎನ್ನ ಬಿಟ್ಟು ಹೋದೆಯೇಕೆ' ಎಂದರೆ, ಪಾಂಡವರ ಪತ್ನಿಯಲ್ಲಿ, ಹಸ್ತಿನೆಯ ರಾಣಿಯಲ್ಲಿ ಉತ್ತರವಿರಲಿಲ್ಲ ನೋಡು.
ಕೈತುತ್ತು ತಿನ್ನಿಸದ ಈ ಕೈಗಳು ಉಪಪಾಂಡವರಿಗೆ ಉಣಬಡಿಸುವಾಗ ನಡುಗುತ್ತಿದ್ದುದು ಸತ್ಯ.
ಯುದ್ಧದ ಭರದಲ್ಲಿನ ಆತಂಕವೆಂದುಕೊಂಡಿದ್ದು ಸುಳ್ಳು. ತಾಯ್ತನ ಮರೆತೆನೆಂಬ ಅಳುಕಿನಿಂದೆಂಬುದು ಆಮೇಲೆ ಹೊಳೆದಿತ್ತು.

ಸುಮ್ಮನೆ ನಿನ್ನ ಭರ್ತ್ಸನೆಗೆಳಸಿದೆ; ಮರ್ತ್ಯದಲ್ಲಿ ಅಗತ್ಯವಿದ್ದಾಗ ದಕ್ಕದೇ ಹೋದ ತಾಯ್ತನದ ಶೂನ್ಯಗಳನ್ನು ಮೋಕ್ಷದಲ್ಲಿ ಪೂರೈಸುವೆನೆಂಬ ಭರವಸೆಯಿಲ್ಲ ಕೃಷ್ಣ. ಅದಕ್ಕೇ ಕಾಲನ ಹರಿವಿನಲ್ಲಿ ಬದಲಾಗುವ ಯಮುನೆಯನ್ನು ನಿಟ್ಟಿಸುತ್ತಲೇ ಇದ್ದೆ. ಅದರಲ್ಲಿನ ನೋವಿನ ಎಳೆಗಳನ್ನೆಲ್ಲ ಆಪೋಶಿಸಿ ಮನಸಿನಲ್ಲಿ ಹಣೆಯುತ್ತಿದ್ದೆ; ನೋವು ಅಭ್ಯಾಸವಾಗಿ ಹೋಯಿತೇ ಹೊರತು ಪ್ರಾಯಶ್ಚಿತ್ತ ಸಿಕ್ಕಲಿಲ್ಲ.

(ಸಟ್ಟನೆ ಏನೋ ಹೊಳೆದಂತೆ)
ನೋಡು, ವೈತರಣಿಗೆ ನನ್ನನ್ನೊಯ್ದು ಬಿಡು ಕೃಷ್ಣ; ಅದರಲ್ಲಿನ ನೋವಾದರೂ ನನ್ನ ಶೂನ್ಯತೆಯನ್ನು ಬಯಲಾಗಿಸೀತೇನೋ?

ಕೃಷ್ಣ:

ಕಾಲ ಎಸೆಯುವ ದಾಳಗಳ ಎಲ್ಲ ಮುಖಗಳನ್ನು ಕಂಡವರಿಲ್ಲ; ಎಲ್ಲ ಕಂಡೆನೆಂದುಕೊಂಡ ಗಳಿಗೆಯಲ್ಲೆ ದಿಕ್ಕೆಡಿಸುವಂತೆ ಕಂಡು ಬರುವುದು ಹೊಸದೇ ಒಂದು ಮುಖ ಸಖಿ.
ವೈತರಣಿಯೆಂದೆಯಲ್ಲ? ಅದು ಬತ್ತಿ ಹೋದರೇನಾದೀತೆಂಬ ಕಲ್ಪನೆ ಕಾಲನಿಗೂ ಬೇಕಿದ್ದಂತಿಲ್ಲ. ಅದಕ್ಕೇ ನೋಡು, ಅನಂತದಂತರದಲ್ಲಿಟ್ಟು ಸಂಚಲನೆ ಕೊಟ್ಟಿದ್ದಾನೆ; ಕನಸಿಗೂ ನಿಲುಕದಂತೆ!
ಅಲ್ಲದೆ, ನಿನಗೆ ನೀನೆ ಕೊಟ್ಟ ನೋವಿನ ಪರಿ ವೈತರಣಿಯಲ್ಲಿ ಕಾಣ ಸಿಗದಲ್ಲಾ..
ಎಲ್ಲಕ್ಕೂ ಅರ್ಥ ಬರುವ ಕಾಲವಿದೆ ಸಖಿ. ಹಾಗೆಂದು ನಿನ್ನನ್ನೇ ಹುಡುಕಿ ಬಂದಿದ್ದೆ ನೋಡು:
ಐವರು ಪುರುಷರಲ್ಲಿ, ರಾಜ್ಯಶ್ರೀ ದ್ರೌಪದಿಗೇ ದೊರೆಯದ ಸಂತುಷ್ಟಿಯನ್ನು ಗೊಲ್ಲನ ಕೊಳಲ ಗಾನದಲ್ಲಿ ಕಂಡ ಸ್ತ್ರೀಯರ ತಾಯ್ತನದ ಹಿರಿಮೆ

ತಿಳಿಯುವೆಯಂತೆ. ಬೆಳಗಿನ ಸೂರ್ಯ ರಶ್ಮಿಯ ರೇಖೆಯುದ್ದಕ್ಕೂ ಮೆಟ್ಟಿಲು ಕಟ್ಟುವಂತೆ ಕೊಳಲ ನುಡಿಸಿದ್ದೆ ತಂಗಿ. ಆ ಮೆಟ್ಟಿಲುಗಳನ್ನೇರಿ ಸ್ವರ್ಗಕ್ಕೆ ಸಾಗಿದವಳೆಂದರೆ ರಾಧೆಯೊಬ್ಬಳೆ ನೋಡು. ಸತಿಯಾದ ರುಕ್ಮಿಣಿಗೆ ನನ್ನ ಹೃದಯದಲ್ಲಿ ಸೆರೆಯಾಗುವ ಆಸೆಯಾದರೆ, ಸತ್ಯೆ ಕೊಳಲ ಗಾಯನ ತರುವ ಸುಖ ತಿಳಿದೂ, ಅದರಲ್ಲಿನ ಸ್ವತಂತ್ರ ಸೂತ್ರಕ್ಕೆ ಬೆಚ್ಚಿ ಬಿದ್ದವಳು; ರವಿಯ ಬಿಸಿಲ್ಕೋಲುಗಳಿಗೆ ನಾನೇ ಇಟ್ಟ ಮೆಟ್ಟಿಲುಗಳನ್ನು ನನ್ನಿಂದಲೇ ತುಳಿಯಲಾಗದಂತೆ ಬಂಧಿಸಿದವಳು.

ಸಖಿ, ಮುರಳಿಯ ಗಾಯನದ ಲಯವರಿತು, ಸೂರ್ಯ ರಶ್ಮಿಯ ಜಾಡು ಹಿಡಿದು, ಪಾರಿಜಾತದ ವಾಸನೆಯರಿಯುವ ಶ್ರಮ ವಹಿಸಬೇಕು ನೋಡು. ಅಂತಹುದೇ ಒಂದು ಘಳಿಗೆ: ಎತ್ತರದ ಮರವೊಂದರ, ತುತ್ತ ತುದಿಗೇರಿ ಸೂರ್ಯನ ಬೆಳಕಿನ ಜಾಡು ನೋಡುತ್ತ ಕೊಳಲು ನುಡಿಸಿದ್ದೆ ನೋಡು; ಹಿಂದೊಮ್ಮೆ ಅದರ ಸುಧೆಯಲ್ಲಿ ಸುರಲೋಕಕ್ಕೆ ಸಾಗಿದ್ದ ರಾಧೆಯ ನೆನಪಿತ್ತು ಮನಸಿನಲ್ಲಿ.
ತಂಬೂರಿಯ ಶ್ರುತಿಯಲ್ಲಿ, ನನ್ನ ನೆನಪಿನ ಕನಸಿನಲ್ಲಿ, ಚಂದ್ರಲೋಕಕ್ಕೆ ಲಗ್ಗೆಯಿತ್ತ ಮೀರೆಯಂತಹ ನೆನಪಿನಲ್ಲಿದ್ದೆ ಸಖಿ:
ಆಹ್..ಎಂತಹ ತೀಕ್ಷ್ಣ ನೋವು; ಹಸಿವಿಗಾಗಿ ಜಿಂಕೆಯ ಬೇಟೆಯಾಡಿದವ ನಾನಲ್ಲ; ಆಟಕ್ಕಾಗಿ ಹುಲಿಯ ಬೆಂಬತ್ತಿದವನೂ ಅಲ್ಲ; ಸರಸದ ವೇಳೆಯಲ್ಲಿದ್ದ ಚಕೋರಗಳನ್ನೆಂದೂ ಎಚ್ಚರಿಸದ ಮುರಳಿಯ ಪಾಲ ನಾನು ಕೃಷ್ಣೆ.

ಕೊಳಲಿಂದ ನಾದ ಹೊರಡಲಾರದಷ್ಟು ನೋವು ಸಖಿ; ಯುದ್ಧದಲ್ಲಿ ಅದೆಷ್ಟು ಆಘಾತಗಳನ್ನನುಭವಿಸಿದ್ದರೂ ಆ ನೋವಿನ ಅರ್ಥ ಸಿಕ್ಕಲಿಲ್ಲವಲ್ಲ. ಕಾಲಿನುಂಗುಷ್ಠಕ್ಕೆ ತಗುಲಿದ ಬೇಡನೊಬ್ಬನ ಹಸಿವಿನ ನೋವು ಸಖಿ;
ಆ ಹಸಿವನ್ನೂ ತೀರಿಸಲಾರದೆ ಹೋದೆ ನೋಡು. ಏತರ ಪಾಪವೆಸಗಿದೆ ನಾನು, ಇಂದಿಗೂ ತಿಳಿದಿಲ್ಲ ಕೃಷ್ಣೆ. .. ನಿನ್ನಂತಹ ತಾಯಂದಿರ ಸುಪ್ತ ಶಾಪದ ಫಲವಿರಬೇಕು..ಹಾಗೆಂದೇ ಕಾಲನ ಅನಂತದಲ್ಲಿ ಲೀನವಾಗಿರುವೆ ನಾನು.

ನೋಡು; ಇನ್ನೇನು ಸೂರ್ಯ ರಶ್ಮಿ ಬರಲಿದೆ; ಯಮುನೆಯ ಜುಳು ಜುಳು ತಾಳ ಹಿಡಿದಿದೆ; ಗೋಕುಲದಲ್ಲಿ ನಾನು ಬಿಟ್ಟಿದ್ದ ಮುರಳಿಯಿನ್ನೂ ಮೌನ ಒಡೆದಿಲ್ಲ ನೋಡು; ಮುರಳಿಯ ಗಾಯನಕ್ಕೆ ತೃಪ್ತಿಯಾಗಲು ಮನುಷ್ಯ ಇನ್ನೂ ಕಲಿಯ ಬೇಕಿದೆ..ಬಾ ಅಲ್ಲಿಯವರೆಗೆ, ನನ್ನ ಜೊತೆಗೆ; ಮರ್ತ್ಯರ ಕಣ್ಣಿಗೆ ಕಾಣದ ಈ ಮೆಟ್ಟಿಲೇರಿ ಬಾ; ರಾಧಿಕೆ ನಡೆದು

ಹೋದ ಜಾಡು ಹಿಡಿದು ಹೋಗೋಣವಂತೆ; ಒಮ್ಮೊಮ್ಮೆ ಅಲ್ಲಿ ನಾನು ಭೀಮನ ಜಾಡು ಕಂಡಿದ್ದುಂಟು; ನಿನಗೇ ಅಚ್ಚರಿಯಾಗುವಷ್ಟು ಮೃದುವಾದ ಪಾದಗಳ ಅಚ್ಚು. ನಿನ್ನ ಕೈಗೆ ಸಿಕ್ಕರೆ ಚೆನ್ನೆನಿಸುತ್ತದೆ. ಬರುವೆಯಾ ಸಖಿ? ಅಕ್ಷೋಹಿಣಿ ಸಂಖ್ಯೆಯ ಭರತ ಪುತ್ರರಲ್ಲಿ ಕೆಲವರಷ್ಟೇ ಕಂಡ ಹಾದಿಯದು.

ಶಬ್ದ ಮೌನಗಳ ಸಖ್ಯದಲ್ಲಿ
ಎದೆಯ ಬಡಿತದ ತಾಳದಲ್ಲಿ
ಹರಿವ ನೀರಿನ ಮೇಲೆ ನಡೆಯುವ ಸುಖ;

ದಿಗಂತಗಳಿಗೆ ಚಾಚುವ ಕಾಲನ ಸೇತುವೆ;
ಹಿಂಜಿದ ಹತ್ತಿಯಂತಹ ಮೋಡಗಳ ಒಳಗೊಮ್ಮೊಮ್ಮೆ ದೃಷ್ಟಿಗೋಚರ ವಾಗುವ ಚಂದ್ರನಂಥ ಮುಖಕಮಲ.
ಬಾ ಸಖಿ, ಮನುಷ್ಯರಿಗಿನ್ನೂ ಯುಗಾಂತ್ಯವಾಗಿಲ್ಲ. ಮಾಂಸಮಜ್ಜೆಗಳ ಗೋಳು ಮುಗಿಯುವ ಸಮಯವಿನ್ನೂ ಬಂದಿಲ್ಲ. ಅಸ್ತ್ರ ಶಸ್ತ್ರಗಳ ಚಪಲದ ಕ್ಷಾತ್ರ ರಜಸ್ಸು ಇನ್ನೂ ಅಳಿದಿಲ್ಲ. ಬಿಡು ಇವರ ಗೋಳು;
ಬಾ ಹತ್ತು ಸೂರ್ಯ ರಶ್ಮಿಯ ಮೆಟ್ಟಿಲನ್ನು;
ಉಪ ಪಾಂಡವರ ಗಾಯನ ಕೇಳುವೆಯಂತೆ; ಇಲ್ಲೂ ಅವರ ಮೂಕ ಶೋಕದ ರಾಗ ಶುದ್ಧಿಯಿದೆ.
ಭೋರೆಂದು ಹರಿಯುವ ಜಲಪಾತದಂತಹ ಇಲ್ಲಿನ ಗಾನಸೆಲೆಯನ್ನು ಭೀಮನಿನ್ನೂ ಅವಲೋಕಿಸಿಲ್ಲ; ಅವನ ಹುಡುಕಾಟದ ಮೃದುವಿಗೆ ನಿನ್ನಯದೇ ಗುರಿಯೇನೋ?

ಬಾ ನೋಡುವಿಯಂತೆ ನೀನು;
ಬಾ ಸಖಿ.

## ಯುಗಾಂತ್ಯ ಹಾಡುಗಳು

'ಯುಗಾಂತ್ಯ' ವನ್ನು ಮೊದಲ ಬಾರಿಗೆ ರಂಗಕ್ಕಿಳಿಸಿದ 'ನಟರಂಗ' ದ ಕಲಾವಿದರುಗಳು ಬಳಸಿದ್ದು ಯಕ್ಷಗಾನದ ತಂತ್ರ. ಅದಕ್ಕೆ ಬಳಸಿದ ಯಕ್ಷ ಪದಗಳನ್ನಿಲ್ಲಿ ಕೊಡಲಾಗಿದೆ. ಇದರ ಕರ್ತೃಗಳು ಕೃಷ್ಣಮೂರ್ತಿ ಕವತ್ತಾರ್ ಮತ್ತು ಶ್ರೀಧರ ಹೆಬ್ಬಾರ್.

**ತ್ರಿವುಡೆ ಏಕತಾಳ**

ಇತ್ತ ಶಕುನಿಯು ಸಗ್ಗದಲಿ ತಾ। ದ್ವಂದ್ವಪೀಡಿತನಾಗಿ ಮನದಲಿ॥
ಶಾಪರೂಪದ ವರವೊ ಎನಗಮರತ್ವಬೇಕೆ॥

**ಭಾಮಿನಿ ಶಿವರಂಜನಿ**

ತಾಯೆ ನಿನ್ನಯ ಸ್ಥಿತಿಗೆ ನಾನು ಹೊಣೆಯೆ! ಮುಕುಟಪ್ರಾಯಳು ಹಸ್ತಿನೆಗೆ ನೀ॥

**ಭಾಮಿನಿ ಹಿಂದೋಳ**

ಕೃಷ್ಣಾ...ಕೃಷ್ಣಾ...ತುರುಗಾಹಿ ಗೋವಳನ
ಮುರಳಿಗಾನದ ಸವಿಯು ಎನಗೆ ಕರ್ಕಶವು.

**ಏಕ-ನವರೋಜ ಮುಕ್ತಾಯ ತಿತ್ತಿತ್ತೈ**

ಆಡಿದನು ಪಗಡೆಯನು ದೊರೆ ಉರುಳಿಸಿದ ದಾಳದಲಿ।
ಶಕುನಿಯು ನಡೆಸಿದ ನಡೆಯಲಿ ಧರ್ಮಜ । ನಡೆಯೊಳಡಗಿದ ಮರ್ಮವನರಿಯದೆ

**ಕಾನಡ ಭಾಮಿನಿ**

ಸಮ್ಮತವೆ ನಿನಗಿದು ಹೇ ಸಂಬಂಧಿ।
ಎನ್ನ ರಮಣರ ಅನುಜನಲ್ಲವೆ ನೀನು।
ಮೈದುನನೇ ನಿನಗಿದು ಸಮ್ಮತವೇ॥

**ಭೈರವಿ**

ಹಾ ಧರ್ಮಜಾ ಧರ್ಮದಾ ಪ್ರತಿರೂಪ.. ಇದು ರಾಜ ಧರ್ಮವೇ. ಈ ಪರಿಯ
ನಿರ್ಲಜ್ಜೆ ಶೋಭೆಯೇನೈ ನಿನಗೆ..... ಹಾ ಧರ್ಮಜಾ।

**ಕೇದಾರ**

ಹಾ ವೃಕೋದರ ದ್ವಿತೀಯ ಪಾಂಡವನಲ್ಲವೇ ।
ನಾ ಬೇಡವಾದೆನೆ ನಿನಗೆ .... ತಾಳೆನಾ ಈ ಹಿಂಸೆಯ...

**ರಂಜನಿ**

ಹೇ ಧನಂಜಯ ಮೂರುಲೋಕದ ಗಂಡ ನಿನಗಿದು
ನ್ಯಾಯ. ಸಮ್ಮತವೇ
ನಿನ್ನರಸಿಯಾ ಮಾನ ಉಳಿಸಲಾರೆಯ॥

**ಭೈರವಿ**

ಹಾ ಮಾದ್ರಿತನಯರೆ ನಿಮಗಿದು ಸಮ್ಮತವೇ
ಧೂರ್ತನೆನ್ನಯ ಮಾನ ತೆಗೆವನು ದಾಳದಾಟಕೆ ನಾ
ಮೂಕ ಪಶುವೇ ಹೇಳಿ ... ಮಾದ್ರಿ ತನಯರೇ....

**ತ್ರಿವಡೆ ಏಕ ತಿತ್ತಿತ್ತೈ**

ಧರ್ಮವೆಂದರೇನು ಕೃಷ್ಣ। ಧರ್ಮವೆಂದರೇನು॥
ಕಣ್ಣು ಕಂಡ ಮರ್ಮವಷ್ಟೆ। ಧರ್ಮಯೆನುವೆ ಏನು॥

**ಭಾಮಿನಿ ಮೋಹನ**

ಜೇಷ್ಠ ಕೌಂತೇಯ ಕರ್ಣ ಕುಲವಿಹೀನನೆ ಕೃಷ್ಣ...
ಕುಲದ ಮರ್ಮವನರುಹದೆಯೆ ಕರ್ಣನಂ ಘಾತಿಸಿದೆಯಾ ಕೃಷ್ಣ।

**ಝಂಪೆ**

ರುಧಿರ ನೀರುಗಳ ಪಾಶವನುಹರಿ । ದೊಗೆಯೆನುತ । ಹರಿ ನಿನ್ನಲೆನ್ನ
ಕೋರಿಕೆಯು ।
ಎನ್ನ ಜೀವಿತದೊಳಗೆ ಇಂದ್ರಪ್ರಸ್ಥದಪೀಠ। ವೇರುವಾಸೆಯು ಎನಗೆ
।
ಅನುಜೆ ಗಾಂಧಾರಿ ಒಡಲಿಂದ॥

**ಭೀಮ್ ಫಲಾಸ್ . ಝಂಪೆ**

ಹೇ ಮುರಳಿಯಲೋಲ ಶ್ರೀಹರಿ ಕರುಳಪಾಶವನು । ಮರೆವದುರುಳನೇ
ಪೇಳು
ನೀನು ॥ ಕಲ್ಲು ಕರಗುತ ಕದಡಿ ಕಣ್ಣೀರ ಹರಿಸೀತು।
ಅರಿತು ನೀನರಿಯುದಂತಿಹೆಯೆ।
ಕದನ ಸನ್ನಿಯೊಳ್ಳೈದು ಮುಖಗಳ ಪಿತನು ತಾನೆನುತ ಲೋಕಕೆ ।
ಮುದದಿ ನಿನ್ನಯ
ಮುಖ ತೋರಿದೆಯ । ದೇವಾ ಮುರಳಿಲೋಲನೆ ಶ್ರೀಹರಿ॥

**ಮೋಹನ**

ಕೃಷ್ಣಾ..... ಕೃಷ್ಣಾರ್ಪಣಮಸ್ತು.... ಕೃಷ್ಣಾರ್ಪಣಮಸ್ತು....
ಕೃಷ್ಣಾರ್ಪಣಮಸ್ತು....

**ದೇಶಿ ಏಕ**

ಬಾ ಸಖೀ ಬಾ.... ಸಖೀ... ಸೂರ್ಯ ಜಾಡನು ಹಿಡಿಯುವ ಬಾ ಸಖೀ
ಉಪಪಾಂಡವರ ಗಾಯನ ಕೇಳಲು ಬಾ....ಸಖೀ।
ಮುರಳಿಯ ಸಾಲಲಿ ನಡೆಯುವ ಬಾ ಸಖಿ...। ಮಾಂಸ ಮಜ್ಜೆಗಳ ವಾಸನೆ ತೊರೆದು
ಕ್ರೌರ್ಯ ಹಿಂಸೆಗಳ ಜಾಲವ ತೊರೆದು । ಪಾರಿಜಾತದ ಜಾಡನು ಹಿಡಿದು...।

**ಅಕ್ಟೋಬರ್ ೧೦, ೨೦೦೫ ರಂದು, ನಟರಂಗ ಪ್ರದರ್ಶಿಸಿದ 'ಯುಗಾಂತ್ಯ' ದ ಪ್ರಥಮ ಪ್ರಯೋಗದಲ್ಲಿ ಭಾಗವಹಿಸಿದ ಕಲಾವಿದರು:**

**ನಟವರ್ಗ:**

ಕೃಷ್ಣಮೂರ್ತಿ ಕವತ್ತಾರ್
ವಿನಯ್ ಚಂದ್ರ
ಪವನ್ ಕುಮಾರ್
ಪ್ರಮೋದ್ ಕೆ. ಶೆಟ್ಟಿ
ರಶ್ಮಿ
ವಿನಯ್
ಸುಜಯ್
ಎಂ. ಜಿ. ನವೀನ್

**ಯಕ್ಷ ಸಂಗೀತ:**

ವೇಣು (ಭಾಗವತಿಕೆ)
ಬಾಯರಿ: (ಚಂಡೆ)

**ರಂಗ ಸಂಗೀತ:**

ಪ್ರಸನ್ನ ವೈದ್ಯ
ಕಿರಣ್ ಎಸ್. ವಿಪ್ರ
ಕಾರ್ತಿಕ್ ಪಾಂಡವಪುರ

ರಂಗ ವಿನ್ಯಾಸ: ಚಲಪತಿ

**ಬೆಳಕು ವಿನ್ಯಾಸ:** ರುದ್ರಯ್ಯ, ರವಿಪ್ರಶಾಂತ್, ಕುರಾಡಿ ಸೀತಾರಾಮಶೆಟ್ಟಿ

**ಯಕ್ಷವೇಷಭೂಷಣ:** ಶ್ರೀನಿವಾಸ ಸಾಸ್ತಾನ (ಕರ್ನಾಟಕ ಕಲಾದರ್ಶಿನಿ)
**ನಿರ್ಮಾಣ:** ಶ್ರೀನಿವಾಸ ಕಪ್ಪಣ್ಣ

# ಯುಗಾಂತ್ಯ

## ಶಕುನಿ ಕಣ್ಣಲ್ಲಿ ಮಹಾಭಾರತ : ಒಂದು ವಿಮರ್ಶೆ

ಮಹಾಭಾರತವನ್ನು ಹಲವಾರು ಕೋನಗಳಿಂದ ಗ್ರಹಿಸಿ ಹಲವರು ನಾಟಕವಾಡಿಸಿದ್ದಾರೆ. ಆದರೆ ಕುರುಕ್ಷೇತ್ರ ಯುದ್ಧಕ್ಕೆ ಮೂಲಭೂತ ಕಾರಣಕರ್ತನಾದ ಶಕುನಿಯ ದೃಷ್ಟಿಕೋನದಿಂದ ಮಹಾಭಾರತವನ್ನು ಮರುವ್ಯಾಖ್ಯಾನ ಮಾಡುತ್ತಲೇ ಕೃಷ್ಣನ ತಂತ್ರ ಹಾಗೂ ಮಹಾಭಾರತದ ಕುತಂತ್ರಗಳನ್ನು ವಿಮರ್ಶೆಗೆ ಒಳಪಡಿಸುವ ಯತ್ನಕ್ಕೆ ಕೈಹಾಕಿದ್ದಿಲ್ಲ. ಆ ಒಂದು ಪ್ರಯತ್ನವೇ 'ಯುಗಾಂತ್ಯ' ನಾಟಕ ಪ್ರಯೋಗ.

ಕುರುಕ್ಷೇತ್ರದಲ್ಲಿ ವೀರಮರಣವನ್ನಪ್ಪಿದ ಸುಯೋಧನನಿಗೆ ಸ್ವರ್ಗದ ಸುಖ ಅನುಭವಿಸಲಿಕ್ಕೆ ಯುದ್ಧಲ್ಲಿ ಭಾಗಿಯಾದ ಯಾರಾದರೊಬ್ಬರನ್ನು ಜೊತೆಗೆ ಕರೆದೊಯ್ಯಬಹುದೆಂದು ಕೃಷ್ಣ ಪರಮಾತ್ಮ ಆಯ್ಕೆಯನ್ನು ಮುಕ್ತವಾಗಿಟ್ಟಾಗ, ಆ ಕೌರವೇಶ್ವರ ಆಯ್ದುಕೊಂಡಿದ್ದು ಶಕುನಿ ಮಾವನನ್ನು. ಸ್ವರ್ಗಕ್ಕೆ ಬಂದು ಒಬ್ಬಂಟಿಯಾದ ಶಕುನಿ ಏನೂ ಮಾಡಲೂ ಕೆಲಸವಿರದೇ, ಪಗಡೆ ಆಡಲೂ ಜೊತೆಗಾರರಿರದೇ ಮಹಾಭಾರತದ ಮುಖ್ಯ ಘಟನೆಗಳ ನೆನಪುಗಳನ್ನು ಕನವರಿಸುವುದರ ಸುಂದರ ಕಲ್ಪನೆಯನ್ನು ರಂಗದಂಗಳದಲ್ಲಿ ಯಕ್ಷಗಾನದ ಶೈಲಿಯಲ್ಲಿ ಪ್ರಸ್ತುತಪಡಿಸಿ ಪ್ರೇಕ್ಷಕರಲ್ಲಿ ಬೆರಗು ಹುಟ್ಟಿಸುವಲ್ಲಿ ನಿರ್ದೇಶಕರ ಯಶಸ್ವಿಯಾಗಿದ್ದಾರೆ. ವರ್ತಮಾನದಲ್ಲಿ ಕಾಲ್ಪನಿಕ ಅಸ್ತಿತ್ವದ ಶಕುನಿ ಮತ್ತು ದ್ರೌಪದಿ ಪಾತ್ರಗಳು ಸರ್ವಾಂತರ್ಯಾಮಿ ಕಾಲಾತೀತ ಎನ್ನಲಾದ ಕೃಷ್ಣನ ಕೈವಾಡವನ್ನು ವಿಮರ್ಶಿಸುತ್ತಲೇ ಪ್ರೇಕ್ಷಕರು ಮಹಾಭಾರತದ ರೂಢಿಗತ ಕಥಾನಕದಾಚೆ ನಿಂತು ಆಲೋಚಿಸುವಂತೆ ಪ್ರೇರೇಪಿಸುವಲ್ಲಿ 'ಯುಗಾಂತ್ಯ' ಸಫಲವಾಗಿದೆ.

ಪಗಡೆಯಾಡಿ ಒಂದು ಹನಿ ರಕ್ತ ಹರಿಸದೆಯೇ ಕೌರವರಿಗೆ ಸಂಪದ್ಭರಿತ ಹಸ್ತಿನಾವತಿಯ ಸಿಂಹಾಸನ ದೊರಕಿಸಿಕೊಟ್ಟ ಶಕುನಿ, ಕೃಷ್ಣನಿಗೆ 'ನಿನ್ನ ಮೂಗಿನ ನೇರಕ್ಕೆ ಕಂಡದ್ದನ್ನೇ ಧರ್ಮವೆಂದೆನಿಸಿ ೧೮ ಅಕ್ಷೋಹಿಣಿ ಸೈನಿಕರನ್ನು ಬಲಿಕೊಟ್ಟು ಪಾಂಡವರಿಗೆ ಕೊಡಿಸಿದ್ದು ಶೋಕಭರಿತ ಸೂರೆಹೋದ ವಿಧವೆಯಂತಿದ್ದ ಹಸ್ತಿನಾಪುರದ ಪೀಠವನ್ನು' ಎಂದು ಲೇವಡಿ ಮಾಡುತ್ತಲೇ ತನ್ನ ಆಟದ ಕಪಟತನಕ್ಕಿಂತ ಸಹೋದರರ ಮನಸ್ತಾಪವನ್ನು ರಣರಂಗಕ್ಕೆಳೆದ ಕೃಷ್ಣನ ಕುಟಿಲತೆಯನ್ನು ಪ್ರಶ್ನಿಸುತ್ತಾನೆ. ಯಾರದೋ ರಾಜ್ಯಾಧಿಕಾರದ ಲಾಲಸೆಗೆ ಕೊಲೆಯಾದ ಲೆಕ್ಕವಿಲ್ಲದಷ್ಟು ಅಮಾಯಕರ ದುರ್ದೆಸೆಯನ್ನು ಬಹಿರಂಗಗೊಳಿಸುವ ಈ ಪ್ರಯೋಗವು ಹಿಂದಿನಿಂದ ಇಂದಿನವರೆವಿಗೂ ಕೆಲವರ ಹಿತಾಸಕ್ತಿಗೆ ಹಲವರ ಬಲಿದಾನವಾಗಬೇಕಾದ ಆಳುವ ವರ್ಗದ ವ್ಯವಸ್ಥೆಯ ಅನಿವಾರ್ಯತೆಯನ್ನು ಸೂಚಿಸುವಂತಿದೆ.

ಯಕ್ಷವೇಷಗಳನ್ನು ರೂಪಕಗಳಾಗಿ ಪರಿಣಾಮಕಾರಿಯಾಗಿ ಬಳಸಿ ರಂಗದಂಗಳದಲ್ಲಿ ರಂಗು ಹರಿಸಲಾಗಿದ್ದು, ಶಕುನಿ ಪಗಡೆ ಆಡುವಾಗ ಪಗಡೆ ಕಾಯಾಗಿ ಯಕ್ಷವೇಷಧಾರಿಗಳನ್ನೇ ಬಳಸಿದ್ದು ಸೊಗಸಾಗಿ ಮೂಡಿಬಂದಿದೆ. ಕೇವಲ ಬಟ್ಟೆಯ ಪರದೆಗಳನ್ನು ಏರಿಳಿಸುವ ತಂತ್ರಗಾರಿಕೆಯಿಂದಾದ ರಂಗಸಜ್ಜಿಕೆ (ಚಲಪತಿ) ನಾಟಕದ ಕಾಲಾತೀತ ಆಶಯಕ್ಕೆ ಪೂರಕವಾಗಿದ್ದು, ನಾಟಕದಲ್ಲಿ ಮಾಂತ್ರಿಕ ದೃಶ್ಯ ವೈಭವ ಸೃಷ್ಟಿಸುವಲ್ಲಿ ಗಮನಾರ್ಹ ಕೊಡುಗೆಯನ್ನಿತ್ತಿದೆ.

ಬೆಳದಿಂಗಳಿನಂತಹ ತಂಪಾಗ ಬೆಳಕು ಸಂಯೋಜನೆ (ರವಿಪ್ರಶಾಂತ್) ನೋಡುಗರ ಕಣ್ಣಿಗೆ ತಂಪೆರೆಯುವಂತಿದ್ದು, ಆಗಾಗ ಪಾತ್ರಗಳು ಬಂದು ಮಾತು ಹೇಳಿದ ನಂತರ ಬೆಳಕು ಬೀಳುತ್ತಿದ್ದುದು ಮಾತ್ರ ಅಭಾಸಕರವೆನಿಸುತ್ತಿತ್ತಾದರೂ ನಾಟಕದ ಓಟಕ್ಕೇನೂ ಬಾಧೆಯನ್ನುಂಟು ಮಾಡಲಿಲ್ಲವೆಂಬುದು ಸಮಾಧಾನಕರ.

ಕೃಷ್ಣ ಮತ್ತು ಗೋಪಿಕಾ ಸ್ತ್ರೀಯರ ನೃತ್ಯ ಖುಷಿ ಕೊಡುತ್ತದಾದರೂ, ಒಂದು ದೃಶ್ಯದಲ್ಲಿ ಗೋಪಿಕೆಯರು ಮಾಡರ್ನ್ ನೃತ್ಯದ ಶೈಲಿ ಅನುಕರಿಸಿದ್ದ್ಯಾಕೊ ಸಮಂಜಸವಲ್ಲ. ಹಾಗೂ ಆಗಾಗ ಅನಗತ್ಯವಾಗಿ ಹಿಂಬದಿಯಿಂದ ಬಂದುಹೋಗುವ ನೃತ್ಯಗಾತಿಯರು ಅಪ್ರಸ್ತುತವೆನಿಸುತ್ತಿದ್ದರು. ಸಂಗೀತದಲ್ಲಿ ಚಂಡೆ (ರಾಮಕೃಷ್ಣನಾಯರಿ) ಅಗ್ರಸ್ಥಾನದಲ್ಲಿದ್ದು ಖುಷಿ ಕೊಡುತ್ತದಾದರೂ ನಂತರ ಶೋಕ ರಾಗ ಮತ್ತು ಸಂಗೀತ ಸ್ಥಾಯಿಭಾವವಾಗಿ ಮೂಡಿಬಂದು ಏಕತಾನತೆಯನ್ನುಂಟುಮಾಡುತ್ತದೆ. ದ್ರೌಪದಿ ಮತ್ತು ಕೃಷ್ಣನ ದೃಶ್ಯಗಳಲ್ಲಿ ಸುದೀರ್ಘ ಸಂವಾದ ಮತ್ತು ಉಪದೇಶಗಳೇ ತುಂಬಿಹೋಗಿ ನಾಟಕ ಹಿಡಿತ ತಪ್ಪಿದಂತಾಗಿ ನೋಡುಗರಲ್ಲಿ ಬೇಸರವನ್ನುಂಟು ಮಾಡುವಂತಿತ್ತು.

ಅನಾರೋಗ್ಯ ಪೀಡಿತರಾಗಿ ಜ್ವರದಿಂದ ಬಳಲುತ್ತಿದ್ದರೂ ಕಲಾವಿದ ರಂಗದ ಮೇಲೆ ಬಂದರೆ ಅದು ಹೇಗೆ ಮೈದುಂಬಿ ನಟಿಸುತ್ತಾನೆಂಬುದಕ್ಕೆ ಶಕುನಿ ಪಾತ್ರದ ಕೃಷ್ಣಮೂರ್ತಿ ಕವತ್ತಾರರೆ ಸಾಕ್ಷಿ. ದ್ರೌಪದಿ (ರಶ್ಮಿ) ತನ್ನ ಪಾತ್ರ ಪೋಷಣೆಗೆ ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದರೂ ಆ ಪಾತ್ರಕ್ಕೆ ನ್ಯಾಯ ಸಲ್ಲಿಸುವಲ್ಲಿ ಇನ್ನೂ ಪರಿಶ್ರಮದ ಅಗತ್ಯ ಇದೆ. ವೇಷಭೂಷಣ (ಶ್ರೀನಿವಾಸ ಸಾಸ್ತಾನ) ಗಳು ಕಣ್ಸೆಳೆಯುವಂತಿವೆ.

'ಬಾ ಸಖಿ ಮಾಂಸಮಜ್ಜೆಗಳ ಗೋಳು ಮುಗಿಯುವ ಸಮಯವಿನ್ನೂ ಬಂದಿಲ್ಲ. ಅಸ್ತ್ರಶಸ್ತ್ರಗಳ ಚಪಲದ ಕ್ಷಾತ್ರ ರಜಸ್ಸು ಇನ್ನೂ ಅಳಿದಿಲ್ಲ. ಬಿಡು ಅವರ ಗೋಳು, ಬಾ ಹತ್ತು ಸೂರ್ಯರಶ್ಮಿಯ ಮೆಟ್ಟಿಲನ್ನು' ಎನ್ನುವ ಕೃಷ್ಣನ ಆ ಕೊನೆಯ ಮಾತುಗಳನ್ನು ಕೇಳಿ ಮತ್ತು ರಂಗದಂಗಳದಲ್ಲಿ ಬಂದೂಕು ಹಿಡಿದು ಕುಳಿತ

ಭಯೋತ್ಪಾದಕನನ್ನು ನೋಡಿದ ಪ್ರೇಕ್ಷಕರಿಗೆ ತಮ್ಮ ಸಮಕಾಲೀನ ಗೋಳು, ಯುದ್ಧೋತ್ಪಾದನೆ, ಭಯೋತ್ಪಾದನೆಗಳು ಕಣ್ಣಮುಂದೆ ಹಾದುಹೋಗುವಂತಾಗಿದ್ದು ವಾಸ್ತವ ಸತ್ಯ. ಪೌರಾಣಿಕ ಕಥೆಯನ್ನಾಧರಿಸಿದ ಈ ನಾಟಕದಿಂದ ಪ್ರೇಕ್ಷಕರಲ್ಲಿ ವಾಸ್ತವ ಪ್ರಜ್ಞೆ ಮೂಡಿಸಲು ಮಾಡಿದ ಈ ರಂಗ ಪ್ರಯತ್ನ ಶ್ಲಾಘನೀಯ.

ಹೊಸ ನಾಟಕಗಳೇ ಇಲ್ಲದೆ ಕೇವಲ ಹಳೆಯ ನಾಟಗಳನ್ನೇ ರೀಸೈಕಲ್ ಮಾಡುತ್ತಾ ಕಾಲಹರಣ ಮಾಡುತ್ತಿದ್ದ ರಂಗಭೂಮಿಗೆ 'ಯುಗಾಂತ್ಯ'ದಂತಹ ಹೊಚ್ಚ ಹೊಸ ಕನ್ನಡದ ನಾಟಕ ಪ್ರಯೋಗಗಳಾದರೂ ಪ್ರಾಣವಾಯು ರೂಪದಲ್ಲಿ ಬರಬೇಕಿದ್ದು, ರಂಗಭೂಮಿಯಿಂದ ದೂರವಾಗಿರುವ ಪ್ರೇಕ್ಷಕರನ್ನು ಮತ್ತೆ ತನ್ನ ತೆಕ್ಕೆಗೆ ಸೆಳೆಯುವ ಪ್ರಯತ್ನ ಮಾಡಬೇಕಿದೆ. ಬೌದ್ಧಿಕ ವರಸೆಯ ಈ ನಾಟಕವನ್ನು ಸ್ವಲ್ಪ ಸರಳೀಕರಿಸಿದರೆ ಕನ್ನಡ ರಂಗಾಭಿಮಾನಿಗಳು ಮೆಚ್ಚದಿರುತ್ತಾರೆಯೇ? ರಂಜನೆಯ ಮೂಲಕ ಬೋಧನೆ ಮತ್ತು ಪ್ರಬೋದನೆ ಮಾಡುವ ಸಶಕ್ತ ನಾಟಕಗಳು ಹೆಚ್ಚು ಹೆಚ್ಚು ಮೂಡಿಬಂದಲ್ಲಿ ಕಳೆದುಹೋದ ತನ್ನ ವೈಭವದ ದಿನಗಳನ್ನು ರಂಗಭೂಮಿ ಮತ್ತೆ ಪಡೆಯಬಹುದಲ್ಲವೇ?

**ಶಶಿಕಾಂತ ಯಡಹಳ್ಳಿ**